ಮಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಐದು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುವುದು;

ಓ) 1976ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ 21(1) (14)ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಐದು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುವುದು;

ಔ) 1976ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ 21(1) (14)ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಕರ್ನಾಟಕ ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಐದು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುವುದು;

ಅಂ) 1976ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ 21(1) (14)ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಕುವೆಂಪು ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಐದು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುವುದು;

ಅಃ) 1976ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ 21(1) (14)ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಐದು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುವುದು;

ಕ) 1991ನೇ ಇಸವಿಯ ಕನ್ನಡ ವಿಶ್ವವಿದ್ಯಾನಿಲಯಗಳ ಶಾಸನದ 19(1) ಎನ್ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಕನ್ನಡ ವಿಶ್ವವಿದ್ಯಾನಿಲಯದ ಒಬ್ಬ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುವುದು;

1.10 ಪಿ.ಎಂ.

ಅಧ್ಯಕ್ಷರು : ಈಗ ಸನ್ಮಾನ್ಯ ಸಭಾ ನಾಯಕರು ನಿನ್ನೆ ದಿವಸ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಶ್ರೀ ವೀರಪ್ಪ ಮೊಯ್ಲಿಯವರು ಹಾಗೂ ಇತರ ಸದಸ್ಯರು ಮಂಡಿಸಿದ್ದ ನಿಲುವಳಿ ಸೂಚನೆ ಏನು ಇತ್ತು, ಸದನದ ಎಲ್ಲಾ ಕಲಾಪವನ್ನು ಮುಂದೂಡಿ ಅವರು ಪ್ರಸ್ತಾಪ ಮಾಡಿರುವ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೋ ಅದಕ್ಕೆ ಉತ್ತರ ಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಎ. ರಾಮದಾಸ್ : ಸ್ವಾಮಿ ಜೀರೋ ಅವರ್ ಇದೆಯೇ?

ಅಧ್ಯಕ್ಷರು : ಜೀರೋ ಅವರ್ ಆಗಿ ಹೋಯಿತು.

ಶ್ರೀ ಎ. ರಾಮದಾಸ್ : 3 ದಿವಸಗಳ ಕಾಲದಿಂದ ಮಹಿಳೆಯರ ಮೇಲೆ ನಡೆದಂಥ ವಿಚಾರಗಳನ್ನು ಹೇಳಲು 3 ದಿವಸಗಳಿಂದ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ಜೀರೋ ಅವರ್ ಮುಗಿದುಹೋಯಿತು.

ಶ್ರೀ ಎ. ರಾಮದಾಸ್ : ಸುಮಾರು 80 ಜನ ಮೈಸೂರಿನಿಂದ ಬಂದಂಥ ಮಹಿಳೆಯರು ಬೆಂಗಳೂರಿನಲ್ಲಿ ಇದ್ದಾರೆ ಎನ್ನುವುದರ ಬಗ್ಗೆ ನಾನು ಹೇಳುತ್ತಿದ್ದೇನೆ. 3 ದಿವಸಗಳಿಂದ ಇದಕ್ಕೋಸ್ಕರವಾಗಿಯೇ ಕಾಯುತ್ತಿದ್ದೇನೆ.

ಅಧ್ಯಕ್ಷರು : ನಿಮ್ಮ ಪ್ರಾಮಾಣಿಕತೆಯನ್ನು ನಾನು ಮೆಚ್ಚಿದ್ದೇನೆ. ನೀವು ಹೇಳುವುದು ಮೈಸೂರಿನದ್ದು. ಕರ್ನಾಟಕ ಸಮಸ್ಯೆ ಬಂದಾಗ ಮೈಸೂರು ಅಪ್ರಸ್ತುತ ಆಯಿತು.

ಶ್ರೀ ಎ. ರಾಮದಾಸ್ : ಆದರೆ ನಾನು 3 ದಿವಸಗಳಿಂದ ಕಾಯುತ್ತಾ ಇದ್ದೇನೆ.

ಅಧ್ಯಕ್ಷರು : ದಯಮಾಡಿ ನೀವು ಆಮೇಲೆ ನಮ್ಮ ಕೊಠಡಿಗೆ ಬನ್ನಿ. ನಿಮಗೆ ಸಮಾಧಾನ ಮಾಡುತ್ತೇನೆ. ದಯಮಾಡಿ ನೀವು ಬನ್ನಿ ಆಮೇಲೆ. ಬೇಸರ ಮಾಡಿಕೊಳ್ಳಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ನಿಮ್ಮ ನಿಲುವಳಿ ಸೂಚನೆ ಮೇಲೆ ಉತ್ತರ ಕೊಡಬೇಕು. ಅದಕ್ಕಿಂತ ಮುಂಚೆ ಅಂದರೆ ಇದೇ ಸಂದರ್ಭದಲ್ಲಿ ಹುಬ್ಬಳ್ಳಿಯಲ್ಲಿ ಏನು 21ನೇ ತಾರಾಖು ಗಲಾಟೆಯಾಗಿದೆ ಮತ್ತು ಗೋಲೀಬಾರ್‌ನಲ್ಲಿ ಸುಮಾರು 3 ಜನ ಸತ್ತಿದ್ದಾರೆ ಎಂದು ಹೇಳಿ ಒಂದು ಪೇಪರ್‌ನಲ್ಲಿ ಬಂದಿದೆ. ಕೆಲವು ಪೇಪರ್‌ನಲ್ಲಿ ಇಬ್ಬರು ಸತ್ತಿದ್ದಾರೆ ಮತ್ತು 20 ಜನ ಜಖಂ ಆಗಿದ್ದಾರೆ ಎಂದು ಕೂಡ ಬಂದಿದೆ. ಅದನ್ನು ಕೂಡ ನಾವು ಚರ್ಚೆ ಮಾಡತಕ್ಕಂಥಾದ್ದು ಅವಶ್ಯಕತೆ ಇದೆ. ಇದು ಆದಮೇಲೆ ಅವರು ಉತ್ತರ ಹೇಳಿದರೆ ಒಳ್ಳೆಯದು. ಏಕೆಂದರೆ ಅದೂ ಲಾ ಅಂಡ್ ಆರ್ಡರ್‌ಗೆ ಸಂಬಂಧಪಟ್ಟಂಥದ್ದು ಮತ್ತು ಅದು ನಿನ್ನೆ ಆಗಿದೆ. ಮತ್ತು ನೇರವಾಗಿ ಅವರು ಮಾಹಿತಿಯನ್ನು ಕೂಡ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ನಿನ್ನೆ ಹೇಳಿದ್ದಾರೆ.

ಅಧ್ಯಕ್ಷರು : ತಾವು ಬಹಳ ಹಿರಿಯ ಸದಸ್ಯರು ಇದ್ದೀರಿ. ಹೈಪೊತೆಟಿಕಲ್ ಆಗಿ ನಾನು ತಮಗೆ ಹೇಳುತ್ತಿದ್ದೇನೆ. ನಿನ್ನೆ ತಾವು ಮಾತನಾಡಿದ್ದೀರಿ, ಹೇಳಿದ್ದೀರಿ. ನಿನ್ನೆ ಈ ಘಟನೆ ನಡೆದಿದೆ. ನಾನು ಕೇಳಿದ್ದೇನೆ. ಅವರು ರಿಪ್ಲೈ ಮಾಡುವಷ್ಟರಲ್ಲಿ ಮತ್ತೆ ಇನ್ನೊಂದು ಯಾವುದಾದರೊಂದು ಘಟನೆ ನಡೆಯುತ್ತದೆ. ಮತ್ತೆ ಅದರ ಬಗ್ಗೆ ಈ ತರಹ ಸದನ ನಡೆಸುವುದಕ್ಕಾಗುವುದಿಲ್ಲ. ನೀವು ನನಗೆ ಗೈಡ್ ಮಾಡಿ, ನೀವು ನನಗಿಂತಲೂ ಬಹಳ ಹೆಚ್ಚು ವರ್ಷಗಳ ಕಾಲ ಈ ಸದನದಲ್ಲಿ ಕೆಲಸ ಮಾಡಿದ್ದೀರಿ. ತಾವು ಕ್ಲಾರಿಫಿಕೇಷನ್ಸ್ ಕೇಳತಕ್ಕಂಥ ಸಂದರ್ಭದಲ್ಲಿ ದಯಮಾಡಿ ಅದನ್ನು ಕೂಡ ಸೇರಿಸಿ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಇದನ್ನು ಸವಿಸ್ತಾರವಾಗಿ ಚರ್ಚೆ ಮಾಡಬೇಕು. ಎನ್ನತಕ್ಕಂಥಾದ್ದು ಅಲ್ಲ, ಲಾ ಅಂಡ್ ಆರ್ಡರ್ ಸಿಚುಯೇಶನ್ ಬಗ್ಗೆ ಸವಿಸ್ತಾರವಾಗಿ ನಾನು ಉತ್ತರ ಕೊಡುತ್ತೇನೆ, ಅನೇಕ ಮಾಹಿತಿ ನನ್ನ ಹತ್ತಿರ ಇಲ್ಲ ಅದಕ್ಕಾಗಿ ಇವತ್ತು ತೆಗೆದುಕೊಳ್ಳುವುದಕ್ಕಿಂತಲೂ ನಾಳೆ ಇದನ್ನು ತೆಗೆದುಕೊಳ್ಳೋಣ ಎಂದು ಅವರೇ ಹೇಳಿದರು. ಅದಕ್ಕಾಗಿ ನಾನು ಏನು ಹೇಳುತ್ತಾ ಇದ್ದೇನೆಂದರೆ, ಆವಾಗ ನಾವು ಮಾತನಾಡುವುದಕ್ಕೆ ಅನುಕೂಲ ಏಕೆ ಆಗಲಿಲ್ಲ ಅಂದರೆ ಆವಾಗ ಶ್ರೀ ಸಿಂಧ್ಯಾ ಅವರು ಸ್ಪಾಟ್ ಮೇಲೆ ಹೋಗಿದ್ದಾರೆ ಅವರು ಬಂದ ಮೇಲೆ ಅಧಕ್ಕೆ ನಾನು ಉತ್ತರ ಕೊಡಿಸುತ್ತೇನೆ ಎನ್ನತಕ್ಕಂಥ ಮಾತನ್ನು ಶ್ರೀಮಾನ್ ಯಡಿಯೂರಪ್ಪನವರು ಎತ್ತಿದಾಗ ಮತ್ತು ಶ್ರೀ ವಾಟಾಳ್ ನಾಗರಾಜ್‌ರವರು ಎತ್ತಿದಾಗಲೂ ಕೂಡ ಅವರು ಹೇಳಿದರು. ಅದಕ್ಕಾಗಿ ನಾವು ಆ ಉತ್ತರ ನಿರೀಕ್ಷಣೆ ಮಾಡಿಕೊಂಡೇ ಕುಳಿತಿದ್ದೇವೆ. ಅದಕ್ಕೆ ಪುನಃ ಇವತ್ತು ಪತ್ರಿಕೆಯಲ್ಲಿ ಬಹಳ ಸವಿಸ್ತಾರವಾಗಿ ಬಂದಿದೆ. ಪೋಲೀಸರು ಯಾವ ರೀತಿಯಾಗಿ ಆಲಕ್ಷ್ಯ ಮಾಡಿದ್ದಾರೆ, ಮತ್ತು ಯಾವ ರೀತಿಯಾಗಿ ಆಲಕ್ಷ್ಯ ಮಾಡಿದ್ದಾರೆ, ಮತ್ತು ಯಾವ ರೀತಿಯಾಗಿ, ಯಾವ ಓಣಿಯಿಂದ ಪ್ರೊಸೆಷನ್

ಹೋಗಬೇಕಾಗಿತ್ತೋ ಪ್ರತಿವರ್ಷ ಅಲ್ಲಿ ಹೋಗಿಲ್ಲ. ಬೇರೆ ಓಣಿಯಿಂದ, ಮುಲ್ಲಾ ಓಣಿ ಎನ್ನತಕ್ಕಂಥ ಓಣಿಯಿಂದ ಪ್ರೊಸೆಷನ್ ತೆಗೆದುಕೊಂಡು ಹೋಗಲಿಕ್ಕೆ ಪರ್ಮಿಷನ್ ಕೊಟ್ಟು ಮಸೀದಿ ಹತ್ತಿರ ಹೋದಮೇಲೆ ಇದು ದೊಡ್ಡ ಗಲಾಟೆಯಾಗಿ ಅಲ್ಲಿಂದ ಕೂಡ ಅನೇಕ ವಿಷಯಗಳು ಇವತ್ತು ಬಂದಿವೆ.

ಅಧ್ಯಕ್ಷರು : ಅದನ್ನು ಕೂಡ ಇಲ್ಲಿ ಪ್ರಸ್ತಾಪ ಮಾಡಿದ ಹಾಗೆ ಆಯಿತಲ್ಲ. ನೀವು ಬುದ್ಧಿವಂತಿಕೆಯಿಂದ ಮಾಡಿದ್ದೀರಿ ನಾನೂ ಕೂಡ ಸಹನೆಯಿಂದ ಒಪ್ಪಿಕೊಂಡಿದ್ದೇನೆ. ಈಗ ಅದನ್ನೂ ಕೇಳಿದ ಹಾಗೆ ಆಯಿತಲ್ಲ. ತಾವು ಅದನ್ನು ಸೇರಿಸಿ ಉತ್ತರ ಕೊಟ್ಟು ಬಿಡಿ. ಈಗ ಪ್ರಾರಂಭ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಮಗೆ ಗೊತ್ತಿದ್ದ ಹಾಗೆ ಬಹಳ ಬುದ್ಧಿವಂತಿಕೆಯಿಂದ ಅಲ್ಲಿ ಈದ್ಗಾ ಮೈದಾನದಲ್ಲಿ ನಾವು ಧ್ವಜಾರೋಹಣ ಮಾಡಿಸಿದ್ದೇವೆ, ಪ್ರಶ್ನೆಯನ್ನು ನಾವು ಸಾಲ್ವ್ ಮಾಡಿದ್ದೇವೆ ಎಂದು ಬಹಳ ಕೇಳಿಕೊಂಡರು. ಮತ್ತು ಇವತ್ತು ಅನೇಕ ಕಡೆ ಪೇಪರ್‌ಗಳಲ್ಲೂ ನಾನು ನೋಡುತ್ತಿದ್ದೇನೆ. ಅದರ ಬಗ್ಗೆಯೂ ಬಹಳ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಬರೆಯುತ್ತಿದ್ದಾರೆ. ಅದಕ್ಕಾಗಿ

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನನಗೆ ಬಹಳ ಕಷ್ಟವಾಗುತ್ತದೆ ನೀವು ನನ್ನ ರಕ್ಷಣೆಗೆ ಬರಬೇಕು.

ಅಧ್ಯಕ್ಷರು : ನೀವು ನನ್ನ ಹಿತೈಷಿಗಳು. ವಿವಾದಾಸ್ಪದ ವಿಚಾರಗಳನ್ನು ತೆಗೆದು ನನ್ನನ್ನು ಇಕ್ಕಟ್ಟಿಗೆ ಸಿಕ್ಕಿಸಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದರ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿಲ್ಲ.

ಅಧ್ಯಕ್ಷರು : ಧ್ವಜ ಅಂದ ತಕ್ಷಣ ಅವರು ಎದ್ದರು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನಗೆ ಪರ್ಮಿಷನ್ ಕೊಟ್ಟಿದ್ದೀರಿ ನಾನು ಮಾತನಾಡುತ್ತಿದ್ದೇನೆ. ಅವರಿಗೆ ಪರ್ಮಿಷನ್ ಕೊಟ್ಟಮೇಲೆ ಮಾತನಾಡಲಿ. ಈಗ ಅದನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ನಾನು ಈದ್ಗಾ ಮೈದಾನದ ಬಗ್ಗೆ ಮಾತನಾಡುವುದಿಲ್ಲ. ಆದರೆ ಇದು ಗೊತ್ತಿದ್ದೂ ಕೂಡ ಹೋಳಿ ಪ್ರೊಸೆಷನ್ ಅನ್ನು ಈ ಕಾಮದೇವರ, ಕಾಮಣ್ಣನ ಪ್ರೊಸೆಷನ್ನನ್ನು ಆ ಒಂದು ಪರ್ಟಿಕ್ಯುಲರ್ ಮೊಹಲ್ಲಾದಲ್ಲಿ ಇಲ್ಲಿಯವರೆಗೆ ಒಯ್ದಿಲ್ಲ. 26 ವರ್ಷಗಳಿಂದ ಅಲ್ಲಿ ಬ್ಯಾನ್ ಇತ್ತು. ಸುಮಾರು 1969ರಲ್ಲಿ ಅದೇ ಸ್ಥಳದಲ್ಲಿ ಇದೇ ರಂಗಪಂಚಮಿ ದಿವಸ ದೊಡ್ಡ ಗಲಾಟೆಯಾಗಿ ಅಂದಿನಿಂದ ಅದು ಸ್ಟಾಪ್ ಮಾಡಿದ್ದು, ಇಲ್ಲಿವರೆಗೂ ಅದನ್ನು ಅಲೋ ಮಾಡಿರಲಿಲ್ಲ. ಆದರೆ ಇದು ಗೊತ್ತಿದ್ದೂ ಕೂಡ ಪೋಲೀಸರು ಏಕೆ ಅದೇ ಭಾಗದಲ್ಲಿ ಅದೇ ಓಣಿಯಲ್ಲಿ ಹೋಗತಕ್ಕ ವ್ಯವಸ್ಥೆ ಮಾಡಿಕೊಟ್ಟರು ಮತ್ತು ಮಸೀದಿಯಲ್ಲಿ 1.00 ಗಂಟೆಗೆ ಪ್ರೇಯರ್ ನಡೆಯುತ್ತದೆ ಎನ್ನತಕ್ಕಂಥದ್ದು ಗೊತ್ತಿದ್ದರೂ ಕೂಡ ಆ ಮಸೀದಿ ಮುಂದೆ ಈ ಪ್ರೊಸೆಷನ್ನನ್ನು ಒಯ್ಯಲಿಕ್ಕೆ ಅವಕಾಶವನ್ನು ಏಕೆ ಮಾಡಿಕೊಟ್ಟರು. ಈ ರೀತಿಯಾಗಿ ಮುಲ್ಲಾ ಓಣಿ ಮುಂದೇನೇ ಇದನ್ನು ತೆಗೆದುಕೊಂಡು ಹೋಗಬೇಕು ಅಂದರೆ ಇದರ ಹಿನ್ನಲೆ ಏನು ಇದೆ? ಏಕೆ ಇದಕ್ಕೆ ಅವಕಾಶ ಮಾಡಿ ಕೊಟ್ಟರು? ಏಕೆ ಈ ಪ್ರೊಸೆಷನ್ನನ್ನು ಸ್ಟಾಪ್ ಮಾಡಲಿಲ್ಲ? ಅವರು ಸ್ಟಾಪ್ ಮಾಡಿದ್ದರೆ ಈ ಅನಾಹುತ ಆಗುತ್ತಾ ಇರಲಿಲ್ಲ. ಮೊದಲ ವಿಕ್ಟಿಮ್ ಯಾರು ಅಂದರೆ ಮುಲ್ಲಾ ಓಣಿಯಲ್ಲಿರತಕ್ಕ ಮಸೀದಿಯಲ್ಲಿ ಯಾರು ಆ ಪ್ರೇಯರನ್ನು ಹೇಳಿ ಕೊಡುತ್ತಾ ಇದ್ದರೋ ಆ ಹೇಳಿಕೊಡತಕ್ಕಂಥಾ ಮುಲ್ಲಾನೇ ಮೊದಲು ಇದಕ್ಕೆ ಬಲಿಯಾಗಿದ್ದು, ತದನಂತರ ಇದನ್ನು

ಕಂಟ್ರೋಲ್ ಮಾಡಲಿಕ್ಕೆ ಹೋಗಿ ಪುನಃ ಇನ್ನೊಂದು, ಇನ್ನೊಂದು ಹೀಗೆ 3 ಬಲಿಯಾಗಿದೆ ಅಂತ ಇಲ್ಲಿ ವರದಿಯಾಗಿದೆ. ಕೆಲವು ಕಡೆ ಎರಡು ಜನರಿಗೆ ಆಗಿದೆ ಎನ್ನತಕ್ಕಂತದ್ದು ಇದೆ. ಇದಾದ ನಂತರ 20 ಜನರಿಗೆ ಗಾಯವಾಗಿದೆ, ಸುಮಾರು 12 ಜನರು ಕೆ.ಎಂ.ಸಿ. ಹಾಸ್ಪಿಟಲ್‌ನಲ್ಲಿ ಇದ್ದಾರೆ, 8 ಜನ ಪ್ರೈವೇಟ್ ಹಾಸ್ಪಿಟಲ್‌ನಲ್ಲಿದ್ದಾರೆ ಪರಿಸ್ಥಿತಿ ತುಂಬಾ ಬಿಗಡಾಯಿಸಿದೆ.

ಅಧ್ಯಕ್ಷರು : ನಾನು ತಮಗೆ ಹೇಳುತ್ತಿದ್ದೇನೆ ಅಡ್ಜರ್ನ್‌ಮೆಂಟ್ ಮೋಷನ್ ವ್ಯಾಪ್ತಿ ತಮಗೆ ಗೊತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಲೂಟಿ ನಡೆಯಿತು, ಗಲಭೆ ಆಯಿತು, ಇದರ ಬಗ್ಗೆ ಹೇಳಬೇಕಾಗುತ್ತದೆ. ಏಕೆಂದರೆ ಪುನಃ ಇವತ್ತು ಮಾನ್ಯ ಸಿಂಧ್ಯರವರು ಬರಲಿ ಎನ್ನುವುದು ಬೇಡ. ಅದಕ್ಕಾಗಿ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಎಷ್ಟು ಅಂಗಡಿಗಳು ಲೂಟಿಯಾಗಿವೆ, ಎಷ್ಟು ಜನರಿಗೆ ಗಾಯವಾಗಿದೆ, ಎಷ್ಟು ಹಣ ಹೋಗಿದೆ ಮತ್ತು ಎಷ್ಟು ಜನ ಹಿಂದುಗಳು ಬರುತ್ತಾರೆ, ಮುಸ್ಲಿಂಮರು ಬರುತ್ತಾರೆ, ಇದಕ್ಕೆ ಯಾರು ಕಾರಣಕರ್ತರು, ತಮಗೆ ಗೊತ್ತಿದೆ ಅದು ಬಹಳ ಸೆನ್ಸಿಟೀವ್ ಏರಿಯ ಎಂದು. ಸೆನ್ಸಿಟೀವ್ ಏರಿಯಾ ಎಂದು ಗೊತ್ತಿದ್ದರೂ ಕೂಡ ಜನವರಿ 26ನೇ ತಾರೀಖು ಸಮಸ್ಯೆಯನ್ನು ನಾವು ಬಗೆಹರಿಸಿದ್ದೇವೆಂದು ಹೇಳಿ ಪುನಃ ಇವತ್ತಿನ ದಿವಸ ಈ ಒಂದು ಆಹುತಿಯನ್ನು ತೆಗೆದುಕೊಂಡಿದ್ದಾರೆ. ಇದಕ್ಕೆ ಯಾರು ಕಾರಣ? ಇದನ್ನು ತಾವು ಸ್ಪಷ್ಟವಾಗಿ ಹೇಳಿ, ಇಲ್ಲ ಎಂದರೆ ಇದನ್ನು ಪ್ರತ್ಯೇಕವಾಗಿ ಚರ್ಚೆ ಮಾಡಬೇಕು, ಇದಕ್ಕೆ ಅವಕಾಶ ಮಡಿಕೊಡಿ ಎಂದು ಹೇಳುತ್ತಿಲ್ಲ. ಈ ಮಾಹಿತಿಯು ನಮ್ಮ ಹತ್ತಿರ ಬಂದಿದೆ. ಇವತ್ತು ಅಲ್ಲಿರತಕ್ಕಂತಹ ಹಿಂಡಸಗೇರಿ, ಎಕ್ಸ್.ಎಂ.ಎಲ್.ಎ. ಅವರೂ ಕೂಡ ನನಗೆ ಫೋನ್ ಮುಖಾಂತರ ಕೆಲವು ಮಾಹಿತಿಗಳನ್ನು ಕೊಟ್ಟಿದ್ದಾರೆ, ಯಾರದು ತಪ್ಪು ಎಂದು. ಇದರಲ್ಲಿ ಸ್ಪಷ್ಟವಾಗಿ ಸರ್ಕಾರ ಎಂದರೆ ಪೋಲೀಸರು. ಪೋಲೀಸ್ ಅಂದರೆ ಇದನ್ನು ನಡೆಸತಕ್ಕವರು ಸರ್ಕಾರ. ಅವರೆ ನಿರ್ಲಕ್ಷತೆಯಿಂದಲೇ ಇವತ್ತು ಈ ಒಂದು ಅನಾಹುತವಾಗಿದೆ. ಅದಕ್ಕಾಗಿ ಅವರ ಬಗ್ಗೆ ಏನು ಕರ್ಮ ತೆಗೆದುಕೊಂಡಿದ್ದೀರಿ? ಅದರ ಬಗ್ಗೆ ಯಾವ ಹೇಳಿಕೆಯೂ ಬಂದಿಲ್ಲ. ಅಲ್ಲಿಗೆ ಹೋದಂತಹ ಶ್ರೀಮಾನ್ ಸಿಂಧ್ಯರವರು ಕೂಡ ಇಂತಹವರನ್ನು ಸಸ್ಪೆಂಡ್ ಮಾಡಿದ್ದೇವೆ, ಪೋಲೀಸರ ಮೇಲೆ ಕ್ರಮ ತೆಗೆದುಕೊಂಡಿದೆ ಎನ್ನತಕ್ಕಂತದ್ದನ್ನು ಕೂಡ ಹೇಳಿಲ್ಲ. ಅವರು ಕೂಡ ಏನು ಹೇಳಿದ್ದಾರೆಂದರೆ, ನಾನು ನೋಡುತ್ತೇನೆ ಮಾಡುತ್ತೇನೆ ಎಂಬುದಾಗಿ ಇದರಲ್ಲೇ ಹೋಗಿದ್ದಾರೆ. ಮತ್ತು ಎರಡನೆಯದಾಗಿ ಪೋಲೀಸ್ ಫೋರ್ಸ್ ಅಗತ್ಯತೆ ಇರಲಿಲ್ಲ ತರಿಸಿಕೊಡುತ್ತೇವೆಂದು ಹೇಳಿದಿರಿ. ನಿಮಗೆ ಗೊತ್ತೇ ಇತ್ತು. ಹೋಳಿಯಂದು ಪ್ರೊಶೆಷನ್ ತೆಗೆಯತಕ್ಕಂಥದ್ದು ಸಾವಿರಾರು ಜನ ರಂಗಪಂಚಮಿಯ ದಿವಸ ಬಣ್ಣವನ್ನು ಹಾಕುತ್ತಾರೆ. ಅನೇಕ ಸಾರಿ ಏನಾಗುತ್ತದೆಯೆಂದರೆ, ಬೇಕಿಲ್ಲದ ಜನರ ಮೈಮೇಲೆ ಬಣ್ಣ ಹಾಕಿ ಜಗಳಗಳನ್ನು ಆಡಿದ್ದು ಉಂಟು. ಕೆಲವು ಕಡೆ ಸ್ವಾರ್ಥದಿಂದ ಪ್ರೇಮದಿಂದ ಹೋಗತಕ್ಕಂಥದ್ದು ಕೂಡ ಉಂಟು. ಇಷ್ಟೆಲ್ಲ ಕೂಡ ಟೆನ್ಷನ್ ಇರುತ್ತದೆ ಎಂದು ಗೊತ್ತಿದ್ದರೂ ಕೂಡ ನೀವು ಪ್ರಿಕಾಷನ್ ತೆಗೆದುಕೊಳ್ಳದೆ ಈ ರೀತಿಯಾಗಿ ಸರ್ಕಾರ ತನ್ನ ಆಡಳಿತವನ್ನು ನಡೆಸಿದರೆ ಇದು ಹೇಗೆ? ಇದಕ್ಕೆ ಯಾರು ಜವಾಬ್ದಾರಿ?

ಅಧ್ಯಕ್ಷರು : ಆಯಿತು, ಈಗ ಹೇಳಿದ್ದಾರಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದಕ್ಕೆ ನೀವೆ ಹೊಣೆ, ಆದ್ದರಿಂದ ನಿಮ್ಮ ಹೊಣೆಯನ್ನು ಒಪ್ಪಿಕೊಂಡು ಏನು ಹೇಳುತ್ತೀರಿ ಅದನ್ನು ಸ್ಪಷ್ಟವಾಗಿ ಹೇಳಿ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ. ಸ್ವಲ್ಪ ಬೇಗ ಮುಗಿಸಿ, ಏಕೆಂದರೆ ಉತ್ತರ ಕೊಟ್ಟು ಆದಮೇಲೆ ನಿಮ್ಮ ವಿಷಯ ಕೂಡ ಇದೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನದು ಮುಗಿದು ಹೋಗಿವೆ ಬಿಡಿ, ಬೆಳಿಗ್ಗೆ ನಾನು ಎತ್ತಿದ್ದೇನೆ, ನಾನು ಮಾತನಾಡಿದ್ದೇನೆ. ನಾನು ಒಬ್ಬ ವಿರೋಧ ಪಕ್ಷದ ನಾಯಕ ಎಂದು ಯಾರು ಒಪ್ಪುತ್ತಾರೋ ಇಲ್ಲವೋ ಜನರು ನನ್ನನ್ನು ಆಯ್ಕೆ ಮಾಡಿ ಕಳುಹಿಸಿದಾಗ ಅದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇಲ್ಲವೆಂಬ ಉಸಿರು ಕಟ್ಟುವಂಥ ವಾತಾವರಣ ಈ ಸದನದಲ್ಲಿದ್ದರೆ ನಾವು ಮರ್ಯಾದೆಯಿಂದ ಒಂದು ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡಬೇಕೆಂದು ನಿಶ್ಚಯ ಮಾಡಿಕೊಂಡು ಬಂದಿದ್ದೇವೆ. ಅದರ ಬಗ್ಗೆ ಬಹುಶಃ ಸರ್ಕಾರದ ಹೋಂ ಮಿನಿಸ್ಟರ್ ಹೋಗಿದ್ದರು, ವಾಸ್ತವಿಕ ಸ್ಥಿತಿಯನ್ನು ಮುಖ್ಯಮಂತ್ರಿಗಳು ವರದಿ ಕೊಡಬಹುದು. ನನಗೆ ಸಿಕ್ಕಿರುವಂತಹ ಮಾಹಿತಿ ಪ್ರಕಾರ ನಾನು ದೂರವಾಣಿ ಮೂಲಕ ಪ್ರಮುಖರನ್ನು ಸಂಪರ್ಕ ಮಾಡಿ ವಿಷಯವನ್ನು ತಿಳಿಸಬೇಕೆಂದು ಇದ್ದೆ. ಮೊದಲಿನಿಂದ ಹೋಗುತ್ತಿದ್ದ ರಸ್ತೆಯಲ್ಲಿ ಈ ಸಾರಿ ಹೋಳಿಹಬ್ಬದ ಮೆರವಣಿಗೆ ಹೊರಟಿತ್ತು. ಆದರೆ ಕಮರಿ ಪೇಟೆಯ ಪಕ್ಕದಲ್ಲಿರುವಂತಹ ಒಂದು ಓಣಿಯಿಂದ ಹಲವಾರು ಯುವಕರು ಮಾರಕಾಸ್ತ್ರಗಳನ್ನು, ಆಯುಧಗಳನ್ನು ಇಟ್ಟುಕೊಂಡು ಮೆರವಣಿಗೆ ಬರುತ್ತಿದ್ದಂತವರ ಮೇಲೆ ಹಲ್ಲೆ ಮಾಡಿದರು.

ಆ ಸಮಯದಲ್ಲಿ ಹಳೇ ಹುಬ್ಬಳ್ಳಿಯಲ್ಲಿ ಹೋಳಿ ಹಬ್ಬದ ಮೆರವಣಿಗೆ ಹೊರಟಾಗ ಪೋಲೀಸರು ಬಂದು ಮೆರವಣಿಗೆ ನಿಲ್ಲಿಸಿ, ಇಲ್ಲದಿದ್ದರೆ ಕರ್ಫ್ಯೂ ಹಾಕಿ ನಿಮ್ಮನ್ನೆಲ್ಲ ಪೋಲೀಸ್ ಸ್ಟೇಷನ್‌ಗೆ ಹಾಕಿಸುತ್ತೇವೆಂದು ಹೆದರಿಸಿದರು. ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಸರ್ಕಾರದ ವಿಶೇಷ ಪ್ರಯತ್ನದಿಂದ ದೊಡ್ಡ ಒಂದು ಸಮಸ್ಯೆ ಬಗೆಹರಿದಿದೆ. ಅಲ್ಲಿ ರಾಷ್ಟ್ರಧ್ವಜ ಹಾರಿಸಿದಂತಹ ಕೆಲಸದಲ್ಲಿ ಯಶಸ್ವಿ ಆಯಿತು. ಶಾಂತ ರೀತಿಯ ಒಂದು ವಾತಾವರಣ ಇದೆ. ವ್ಯವಸ್ಥಿತವಾಗಿ ಶಾಂತಿಯನ್ನು ಕದಡುವಂತಹ ಯಾವ ಒಂದು ಕೆಟ್ಟ ಶಕ್ತಿ ಕೆಲಸ ಮಾಡುತ್ತಾ ಇದೆ ಅದು ಯಾರೇ ಆಗಲಿ ಅದನ್ನು ಸದೆ ಬಡಿಯುವಂತಹ ಕೆಲಸ, ಸೂಕ್ತವಾದಂತಹ ಕ್ರಮ ತೆಗೆದುಕೊಳ್ಳುವಂತಹ ಕೆಲಸವನ್ನು ಸರ್ಕಾರ ಮಾಡುತ್ತದೆಂದು ನಾನಾದರೂ ಭಾವಿಸುತ್ತೇನೆ. ಇವತ್ತು ಅಲ್ಲಿ ಪರಿಸ್ಥಿತಿ ಏನು ಆಘಿದೆ ಎಂದರೆ, ಅಲ್ಲಿದ್ದ ಉನ್ನತ ಪೋಲೀಸ್ ಅಧಿಕಾರಿ, ಪೋಲೀಸ್ ಕಮಿಷನರ್‌ರವರು ಸಮಯಕ್ಕೆ ಸರಿಯಾಗಿ ಕೆಲಸ ಮಾಡದಿದ್ದರೆ ಹೋಳಿ ಹಬ್ಬದ ಮೆರವಣಿಗೆ ಅಲ್ಲಿ ಹೋಗುತ್ತಾ ಇದೆ ಎಂದರೆ ಅಲ್ಲಿ ಪೋಲೀಸ್ ಬಂದೋಬಸ್ತ್ ಮಾಡಬೇಕೆಂದು ಅಲ್ಲಿನ ಜನ ಕೇಳಿದರೆ ಪೋಲೀಸ್ ಬಂದೋಬಸ್ತ್ ಇಲ್ಲ ಎನ್ನುವಂತಹ ಉದ್ಧಟತನದ ಮಾತನಾಡುವಂಥದ್ದು ಸ್ವಲ್ಪ ಸೂಕ್ಷ್ಮವಾದಂತಹ ನಗರಗಳಲ್ಲಿ ಯಾವುದೇ ರೀತಿಯ ಘಟನೆಗಳು ಆಗಬಾರದೆಂದು ಅಲ್ಲಿ ಮುಂದಾಲೋಚನೆ ಮಾಡದೆ ಈ ರೀತಿ ಅಹಿತಕರ ಘಟನೆಗಳು ನಡೆಯುವುದಕ್ಕೆ ಬಿಡುತ್ತಿರುವುದು ಇದು ಸರ್ಕಾರಕ್ಕೆ ಗೌರವ ತರತಕ್ಕಂತಹ ಸಂಗತಿ ಅಲ್ಲ. ಶಾಂತಿ ಸುವ್ಯವಸ್ಥೆ ಕಾಪಾಡುವಂಥದ್ದು ಮೊದಲನೆಯ ಕೆಲಸ, ಉಳಿದಿದ್ದು ಎರಡನೆಯದು. ಮೊದಲು ಶಾಂತಿ ಸುವ್ಯವಸ್ಥೆ ಕಾಪಾಡುವ ದೊಡ್ಡ ಜವಾಬ್ದಾರಿ ಸರ್ಕಾರದ ಮೇಲಿದೆ. ಅನೇಕ ಘಟನೆಗಳು ನಡೆದು ಉಸಿರು ಕಟ್ಟುವಂತಹ ಒಂದು ಪರಿಸ್ಥಿತಿ ಇದೆ. ಇದರ ಬಗ್ಗೆ ಮುಖ್ಯ ಮಂತ್ರಿಗಳಿಗೆ ವರದಿ ಬಂದಿರಬಹುದು. ಅಲ್ಲಿ ಯಾರೋ ಒಬ್ಬರು ಸತ್ತಿದ್ದಾರೆ, ಆ ಮೆರವಣಿಗೆ ಮಾಡಬೇಕೆಂದು ಹತ್ತಾರು ಜನ ಸೇರಿದ್ದಾರೆ ಎನ್ನುವಂತಹದ್ದು ಒಂದು ಉಸಿರು ಕಟ್ಟುವಂತಹ ವಾತಾವರಣ. ಇನ್ನೊಂದು ಕಡೆ ಅಲ್ಲಿನ ಪೋಲೀಸ್ ಕಮಿಷನರ್‌ರವರೇ ಅದಕ್ಕೆ ಜವಾಬ್ದಾರಿ. ಈ ರೀತಿ ಘಟನೆಗಳು ಪುನರಾವರ್ತನೆ ಆಗುತ್ತಿದೆ. ಅವರನ್ನು ತಕ್ಷಣ ಸಸ್ಪೆಂಡ್ ಮಾಡಿ ತನಿಖೆಯಾಗಬೇಕು ಎನ್ನುವಂತದ್ದು ಇನ್ನೊಂದು ಗುಂಪಿನ ಒತ್ತಾಯ. ಇದು ಅಲ್ಲಿ ನಡೆಯುತ್ತಿದೆ. ಆದಕ್ಕೆ ನಾನು ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಸಭಾನಾಯಕರಿಗೆ ಹೇಳುವಂಥದ್ದು ದಯಮಾಡಿ ಈ ಘಟನೆ ಪುನರಾವರ್ತನೆ

ಆಗಬಾರದೆಂದು ಹೇಳುವುದಾದರೆ ಬಿಗಿ ಕ್ರಮ ತೆಗೆದುಕೊಂಡು ಸಂಪೂರ್ಣವಾದ ನ್ಯಾಯಾಂಗ ತನಿಖೆಗೆ ಆದೇಶ ತಾವು ನೀಡಿ. ತುರ್ತಾಗಿ ಯಾರು ನಿನ್ನೆ ತಾವೇ ಹೇಳಿದ ಪ್ರಕಾರ ಯಾವ ಪೋಲೀಸ್ ಅಧಿಕಾರಿ ಜವಾಬ್ದಾರಿಯಿಂದ ಕೆಲಸ ನಿರ್ವಹಿಸಬೇಕಾಗಿತ್ತೋ ಅವರು ನಿರ್ವಹಿಸಿಲ್ಲ ಎಂದು ಮನವರಿಕೆಯಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಆ ಪೋಲೀಸ್ ಕಮಿಷನರ್ ಯಾರು ಇದ್ದರೆ ಅವರನ್ನು ತಕ್ಷಣ ಸಸ್ಪೆಂಡ್ ಮಾಡಿ. ಅವರು ಅಲ್ಲಿ ಇರುವವರೆಗೆ ಶಾಂತಿ ವಾತಾವರಣ ಬರುವುದಕ್ಕೆ ಸಾಧ್ಯ ಇದೆಯೆಂದು ನನಗೆ ಅನ್ನಿಸುವುದಿಲ್ಲ. ಮತ್ತು ಈ ನೆಪದಲ್ಲಿ ಅಮಾಯಕರನ್ನು ಬಂಧನ ಮಾಡುವುದಕ್ಕೆ ಮತ್ತೆ ಅಶಾಂತಿ ವಾತಾವರಣ ನಿರ್ಮಾಣಕ್ಕೆ ಅವಕಾಶ ಕೊಡಬಾರದು. ಗೃಹಮಂತ್ರಿಗಳು ಅಲ್ಲಿ ಹೋದಾಗ ಎಲ್ಲಾ ವಿವರಗಳನ್ನು ಅಲ್ಲಿ ಇದ್ದಂತಹ ಜನ ತಿಳಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಒಂದು ವಿಷಯ ನನಗೆ ಅರ್ಥವಾಗದೇ ಇರುವಂತಹ ಸಂಗತಿ ಇಲ್ಲ ಪದೇ ಪದೇ ಒಂದು ಮಾತು ಬರುತ್ತಿರುವುದು. ಮೆರವಣಿಗೆ ಹೋಯಿತು, ಮಸೀದಿ ಮುಂದೆ ಹೋಯಿತು, ಮೆರವಣಿಗೆ ಹೋಯುತಿ ದೇವಸ್ಥಾನದ ಮುಂದೆ ಹೋಯಿತು, ಸನ್ಮಾನ್ಯ ಅಧ್ಯಕ್ಷರೇ, ಇವತ್ತು ನಾವು ಸ್ವತಂತ್ರ ಭಾರತದಲ್ಲಿ ಇದ್ದೇವೆ. ನಾವು ಎಲ್ಲರೂ ಸಹ ಒಂದೇ ತಾಯಿ ಮಕ್ಕಳ ಹಾಗೆ ಬಾಳಬೇಕಾಗುತ್ತದೆ. ಯಾವುದೇ ಜನಾಂಗದವರು ಇರಬಹುದು, ಯಾವುದೇ ಮೆರವಣಿಗೆಯನ್ನು ಶಾಂತ ರೀತಿಯಲ್ಲಿ ಎಲ್ಲಾ ಕಡೆ ಸಂತೋಷದಿಂದ ಹಬ್ಬಹರಿದಿನಗಳನ್ನು ಆಚರಿಸುವಂತಥದ್ದು, ಮೆರವಣಿಗೆಯನ್ನು ಮಾಡುವುದಕ್ಕೆ ಈ ದೇಶದಲ್ಲಿ ಯಾರೂ ಅಡ್ಡಿ ಮಾಡುವುದಕ್ಕೆ ಸಾಧ್ಯವಿಲ್ಲ. ಈ ಮಾತುಗಳನ್ನು ಆಡುವುದೇ ನಾವು ಗಲಭೆಗೆ ಒಂದು ರೀತಿಯ ಪ್ರಚೋದನೆ ಮಾಡಿದಂತಾಗುತ್ತದೆ. ಅದು ಬಹುಸಂಖ್ಯಾತರಿಗೆ ಇರಬಹುದು, ಅಲ್ಪಸಂಖ್ಯಾತರು ಹತ್ತು ಜನ ವಾಸ ಮಾಡುವ ಕಡೆ ಇಡೀ ಊರು ಜನ ಸೇರಿಕೊಂಡು ಹಬ್ಬ ಮಾಡುತ್ತಾ ಇದ್ದಾರೆ. ಇಡೀ ದೇಶದಲ್ಲಿ ಅದರಲ್ಲಂತೂ ನಮ್ಮ ರಾಜ್ಯದಲ್ಲಿ ಅತ್ಯಂತ ಶಾಂತಿಯಿಂದ ಕಾರ್ಯಕ್ರಮಗಳು ನಡೆಯುತ್ತಾ ಇವೆ. ಇಂತಹ ಸಂದರ್ಭದಲ್ಲಿ ಈ ರೀತಿ ಪ್ರಚೋದನೆ ತರುವಂತಹ ಮಾತುಗಳು ಆಗಿರಬಹುದೇನೋ? ಹಾಗೆಂದು ಹೇಳಿದ್ದೇನೆ ನಾನು. ಯಾರು ಎಲ್ಲಿ ಮೆರವಣಿಗೆ ಮಾಡಬೇಕು, ಯಾರು ಯಾವ ರಸ್ತೆಯಲ್ಲಿ ಹೋಗಬೇಕು, ಎಂಬುದನ್ನು ಒಂದು ಪಟ್ಟಿ ಮಾಡುವುದಕ್ಕೆ ಆಗುತ್ತದೆಯೇ. ಇದು ಸರಿಯೇ? ಅನು ಆಗುವುದಿಲ್ಲ ಅಂತ ಈ ರೀತಿ ಒಂದು ವಾತಾವರಣ ಏಕೆ ಬರುತ್ತಾ ಇದೆ. ಯಾರು ತಿಳಿಗೇಡಿಗಳು ಇದಕ್ಕೆ ಬಣ್ಣ ಹಚ್ಚುವಂತಹ ಪ್ರಯತ್ನ

ಮಾಡುತ್ತಾ ಇದ್ದಾರೆ ಜಾತಿಗೆ ವಿಷ ಬೀಜವನ್ನು ಬಿತ್ತುವಂತಹ ಪ್ರಯತ್ನ ಮಾಡುತ್ತಾ ಇದ್ದಾರೆ. ಅದು ಬಹು ಸಂಖ್ಯಾತರು ಇರಲಿ ಅಲ್ಪ ಸಂಖ್ಯಾತರೇ ಇರಲಿ, ಎಲ್ಲರಿಗೂ ಒಂದೇ ಕಾನೂನು, ಒಂದೇ ನ್ಯಾಯ ತಾನೆ? ಅದರ ಕಡೆ ಬಹುಶಃ ಹೊಸ ಸರ್ಕಾರ ಗಮನ ಕೊಡಬೇಕು ಇದೆಲ್ಲ ಆಗಿದೆ, ಅನುಭವ ಆಗಿದೆ, ಇದೆಲ್ಲವನ್ನು ಹಿಂದಿನ ಸರ್ಕಾರ ನೋಡಿದ್ದು ಆಗಿದೆ, ಹೊಸದಾಗಿ ಬದಲಾವಣೆಯನ್ನು ತಂದಿದ್ದಾರೆ. ಹೊಸದನ್ನು ಜನ ನಿರೀಕ್ಷೆ ಮಾಡುತ್ತಿದ್ದಾರೆ. ಅದನ್ನು ಮಾಡುತ್ತೀರಿ ಎಂಬ ವಿಶ್ವಾಸ ನನಗೆ ಇದೆ. ದಯಮಾಡಿ ತಕ್ಷಣ ಇದರ ಬಗ್ಗೆ ಚರ್ಚೆ ಮಾಡಿದರೆ ಒಳ್ಳೆಯದು. ಇನ್ನೂ ಅಲ್ಲಿ ಶಾಂತ ವಾತಾವರಣ ಬಂದಿಲ್ಲ, ಅದನ್ನು ಕದಡಿದಂತಾಗುತ್ತದೆ. ಆ ವಿವರಕ್ಕೆ ನಾನು ಹೋಗುವುದಿಲ್ಲ. ಅದಕ್ಕೆ ತಕ್ಷಣ ನೀವು ನ್ಯಾಯಾಂಗ ತನಿಖೆಗೆ ಆದೇಶ ನೀಡಬೇಕು, ಯಾರು ಈ ಪೋಲೀಸ್ ಕಮಿಷನರ್ ಈ ತರಹ ಗಲಭೆಗೆ ಸೂಕ್ತ ಬಂದೋಬಸ್ತ್ ಮಾಡದೆ ಇದೇ ಒಂದು ಚಿತಾವಣೆಯಲ್ಲಿ ತೊಡಗಿದ್ದಾರೆ ಎಂದು ಜನರ ಅಭಿಪ್ರಾಯ ಬಂದಿದೆ. ಆದ್ದರಿಂದ ಅವರನ್ನು ಸಸ್ಪೆಂಡ್‌ನಲ್ಲಿ ಇಡಬೇಕು. ಮತ್ತು ಅನಾವಶ್ಯಕವಾಗಿ ಎಲ್ಲರನ್ನೂ ಬಂಧನ ಮಾಡದೆ ಯಾರು ಈ ತಿಳಿಗೇಡಿ ಕೆಲಸ ಮಾಡುತ್ತಾರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂಬ ಒತ್ತಾಯವನ್ನು ನಾನು ತಮ್ಮ ಮೂಲಕ ಸಭಾನಾಯಕರಿಗೆ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಯಡಿಯೂರಪ್ಪನವರು ತಪ್ಪು ತಿಳಿದುಕೊಂಡಿದ್ದಾರೆಂದು ಕಾಣುತ್ತದೆ. ನಾನು ಹೇಳಿದ್ದೇನೆಂದರೆ 26 ವರ್ಷಗಳಿಂದ ಆ ಓಣಿಯಲ್ಲಿ ಪ್ರೊಸೆಷನ್ ಹೋಗುತ್ತಾ ಇರಲಿಲ್ಲ. 26 ವರ್ಷಗಳು ಆದನಂತರ ಮೊದಲ ಸಲ ಪರ್ಮಿಷನ್ ಕೊಟ್ಟು ಆ ಮುಲ್ಲಾ ಓಣಿಯಿಂದ ಹೋಳಿ ಪ್ರೊಸೆಷನ್ ಒಯ್ದಿದಕ್ಕಾಗಿ ಈ ಒಂದು ಅಹಿತಕರ ಘಟನೆ ನಡೆದಿದೆ. ಅದಕ್ಕೆ ಪರ್ಮಿಷನ್ ಕೊಡಬಾರದಿತ್ತು ಎನ್ನತಕ್ಕಂತಹ ವಾದ ನನ್ನದು. ಅದಕ್ಕೆ ಅವರು ಏನು ಬಣ್ಣಿಸುತ್ತಿದ್ದಾರೆಂದರೆ ಇದು ಇಲ್ಲಿ ಹೋಗಬಾರದು ಅಲ್ಲಿ ಹೋಗಬಾರದು ಅದಕ್ಕೆ ಒಂದು ಪಟ್ಟಿ ಮಾಡಬೇಕು, ಪಟ್ಟಿ ಮಾಡುವ ಆವಶ್ಯಕತೆ ಬಂದರೆ ಪಟ್ಟಿ ಮಾಡಬೇಕಾಗುತ್ತದೆ. ಒಂದೊಂದು ಏರಿಯಾದಲ್ಲಿ ಪ್ರಾಹಿಬಿಟ್ ಮಾಡಬೇಕಾದರೆ ಮಾಡಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಹಾಗೆ ಹೇಳಿಲ್ಲ. ನಾನು ಹೇಳದೆ ಇರುವ ಮಾತನ್ನು ನನ್ನ ಬಾಯಿಂದ ಏತಕ್ಕೆ ಹೇಳಿಸುತ್ತೀರಿ? ನೀವು ಅದಕ್ಕೆ ಏನೋ ಬಣ್ಣ ಕಟ್ಟಿ ಅಲ್ಲಿ ಶಾಂತಿ ವಾತಾವರಣ ಇರಬಾರದೆಂದು ಪ್ರಯತ್ನ ಮಾಡಿ ಯಶಸ್ವಿಯಾಗಲಿಲ್ಲ. ಅದಕ್ಕೋಸ್ಕರ ದುಃಖದಿಂದ ಇನ್ನೇನೋ ತಿರುಚುವಂಥ ಪ್ರಯತ್ನ ಮಾಡುವುದರಲ್ಲಿ ಅರ್ಥವಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮಂಥವರು ಬೆಂಕಿ ಹಚ್ಚುವ ರೀತಿಯಲ್ಲಿ ಪ್ರಯತ್ನ ಮಾಡಿದರೆ ಯಾವುದೂ ಆಗುವುದಿಲ್ಲ. ಇವತ್ತು ನಾನು ಹೇಳಬೇಕಾಗುತ್ತದೆ. ಬೆಂಕಿ ಹಚ್ಚುವವರು ನೀವೇ ಆರಿಸುವವರು ನೀವೇ.......

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಪಸಂಖ್ಯಾತರಿಗೆ ಬೆಂಕಿ ಹಚ್ಚಿ ಗೊಂದಲದ ವಾತಾವರಣವನ್ನು ಉಂಟುಮಾಡಿದ್ದೀರಿ.

ಶ್ರೀ ಹೆಚ್.ಎನ್. ನಂಜೇಗೌಡ : ನನ್ನದೊಂದು ಕ್ರಿಯಾಲೋಪ ಇದೆ.

(ಗೊಂದಲ)

SRI H.N. NANJEGOWDA : I am on a point of order. I am sorry, I am forced to raise a point of order. ಮಾನ್ಯ ಖರ್ಗೆಯವರು ಹಿರಿಯ ಸದಸ್ಯರಿದ್ದಾರೆ, ಜವಾಬ್ದಾರಿ ಸ್ಥಾನಗಳನ್ನು ನಿರ್ವಹಿಸಿಕೊಂಡು ಬಂದಿದ್ದಾರೆ. ಈ ಸಭೆಯಲ್ಲಿ ಅವರು ಏನೋ ಒಂದು ಜನಾಂಗದ ಹಿತರಕ್ಷಣೆ ಮಾಡುವುದಕ್ಕೆ ಅವರು ಗುತ್ತಿಗೆ ತೆಗೆದುಕೊಂಡ ಹಾಗೆ ಮಾತನಾಡುತ್ತಾರೆ. This I don't like.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಗುತ್ತಿಗೆ ತೆಗೆದುಕೊಂಡಿದ್ದೇವೆ ಎಂದು ಹೇಳಲಿಲ್ಲ. 26 ವರ್ಷಗಳಿಂದ ಆಗಲಿಲ್ಲ ಎಂದು ಹೇಳಿದ್ದೇನೆ. ನೀವು ಗುತ್ತಿಗೆ ತೆಗೆದುಕೊಂಡ ಹಾಗೆ ಮಾತನಾಡುತ್ತೀರಿ, ನಿಮ್ಮದೇ ಮನೋಪಲಿ.

(ಗೊಂದಲ)

ಶ್ರೀ ಪಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೆ, ದೇಶ ಭಕ್ತಿಯನ್ನು ಅವರು ಮಾತ್ರ ಗುತ್ತಿಗೆಗೆ ತೆಗೆದುಕೊಂಡಿಲ್ಲ, ಬೇರೆ ಎಲ್ಲರೂ ಇದ್ದಾರೆ ದೇಶದಲ್ಲಿ. ಅವರು ಮಾತ್ರ ಅಲ್ಲ. ಪ್ರಜಾಪ್ರಭುತ್ವ ಅವರಿಗೆ ಅಲ್ಲ. ಎಲ್ಲರಿಗೂ ಇದೆ. ಯಾವ ಓಣಿಯಲ್ಲಿ ಹೋಗಬೇಕು ಹೋಗಬಾರದು ಎಂದು. ಗಲಾಟೆ ಸೃಷ್ಟಿ ಮಾಡಿಬಿಟ್ಟು ಇಲ್ಲಿ ಬಂದು

ಪ್ರಜಾಪ್ರಭುತ್ವವನ್ನು ಮಾತನಾಡತಕ್ಕದ್ದು ಸರಿಯಲ್ಲ. ಅವರು ಮಾತ್ರ ಗುತ್ತಿಗೆ ತೆಗೆದುಕೊಂಡಿರುವುದಿಲ್ಲ.

ಅಧ್ಯಕ್ಷರು : ಆಯಿತು ದಯಮಾಡಿ ಕುಳಿತುಕೊಳ್ಳಿ. ಮತ್ತೆ ಪ್ರಚೋದನೆಯಾಗುತ್ತದೆ.

ಶ್ರೀ ಎಚ್.ಎನ್. ನಂಜೇಗೌಡ : ಏನು ಆಗುತ್ತದೆ ಎಂದರೆ, ಇಲ್ಲಿ ರೋಷನ್ ಬೇಗ್ ಅವರು ಇದ್ದಾರೆ ಮಾನ್ಯ ಮಂತ್ರಿಗಳು ನಾವು ಏಕೆ ರೆಸ್ಟ್ರಿಕ್ಟ್ ಆಗಿ ಇರಬೇಕು ಎನ್ನುವುದಕ್ಕೆ ಅವರ ಉದಾಹರಣೆ ತೆಗೆದುಕೊಂಡು ನಾನು ಹೇಳುತ್ತೇನೆ. ಒಂದು ಕೇಸು ತನ್ನ ಗಮನಕ್ಕೆ ಬಂದಿದೆ. ಒಬ್ಬರು ಅಡ್ವೋಕೇಟ್ ನನ್ನನ್ನು ಪ್ರಾರ್ಥನೆಗೆ ಸೇರಿಸುತ್ತಿಲ್ಲ ಎಂದು ಹೇಳಿದರು. ನಾನು ಏನು ಮಾಡಿದೆ ಆ ಪ್ರಾಪರ್ಟಿ ಯಾರದಪ್ಪ ಅಂದೆ. ಅದು ವಕ್ಫ್ ಬೋರ್ಡ್ ಪ್ರಾಪರ್ಟಿ. ಮಂತ್ರಿಗಳಿಗೆ ಹೇಳುತ್ತೇನೆ ಅವರಿಗೆ ನೋಡಿ ಎಂದು ಅವರ ಹತ್ತಿರ ಕಳುಹಿಸಿಕೊಟ್ಟೆ. ಪಾಪ ಅವರು promptly he gave instructions to the Kolar S.P. to interfere in the matter and see that this young gentlemen who is an advocate, a muslim gentlemen, should be allowed to offer his prayers at the Darga at Lokkur. S.P. promptly instructed the Circle Inspector also. ಅವತ್ತು ನಾನು ಅನಿವಾರ್ಯವಾಗಿ ಚಿಕ್ಕತಿರುಪತಿಗೆ ಹೋದೆ, ಅಲ್ಲಿಂದ ಲಕ್ಕೂರಿಗೆ ಹೋದೆ. ಅಲ್ಲಿ ಏನಾಗಿದೆ ಆತನ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :ಪಾಯಿಂಟ್ ಆಫ್ ಆರ್ಡರ್‌ಗೆ ಬನ್ನಿ.

ಶ್ರೀ ಎಚ್.ಎನ್. ನಂಜೇಗೌಡ : ಹೇಳುತ್ತೇನೆ. ರೂಲ್ಸ್ ಇದೆಲ್ಲಾ ಇಟ್ಟುಕೊಂಡಿದ್ದೇನೆ ಖರ್ಗೆಯವರೆ. ಏಕೆ ಹೀಗೆ ಮಾಡುತ್ತೀರಿ? ಪಾಯಿಂಟ್ ಆಫ್ ಆರ್ಡರ್ ಏನು ಎಂದು ಹೇಳುತ್ತೇನೆ. ಪಾಯಿಂಟ್ ಆಫ್ ಆರ್ಡರ್ ಮಾಸ್ಟರ್ ಅಂತಲೇ ಕರೆಯುತ್ತಿದ್ದರು 1967ರಲ್ಲಿ. ಪುಸ್ತಕಗಳನ್ನು ಸಾಕಷ್ಟು ಓದಿಕೊಂಡು ಬಂದಿದ್ದೇನೆ. ನಾನು ಏಕೆ ಹೇಳುತ್ತೇನೆಂದರೆ, ನಾವು ಜವಾಬ್ದಾರಿ ಸ್ವಲ್ಪ ಅನುಭವ ಇರತಕ್ಕಂಥವರು ಸ್ವಲ್ಪ ಜವಾಬ್ದಾರಿಯಿಂದ ಮಾಡಬೇಕು. ಅಲ್ಲೇನಾಯಿತು? ಇನ್‌ಸ್ಪೆಕ್ಟರ್ ಅವಕಾಶ ಮಾಡಿಸಲಿಲ್ಲ. ಏಕೆ ಮಾಡಿಸಲಿಲ್ಲ? ನೀನು ಏಕೆ ಬಿ.ಜೆ.ಪಿ. ಸೇರಿದೆ ಎಂದ ಅವನು. ಇದು ನಡೆದಿರತಕ್ಕಂಥದ್ದು. ಬೇಕಾದರೆ ಯಾರನ್ನಾದರೂ ಕಳುಹಿಸಿ ನೀವು ವಿಚಾರಣೆ ಮಾಡಿಕೊಳ್ಳಿ. ಆ ಯುವಕನನ್ನು ಏಕೆ ಬಿ.ಜೆ.ಪಿ ಸೇರಿದ್ದಿರಿ. ಪೋಲೀಸ್ ಇನ್‌ಸ್ಪೆಕ್ಟರ್ ಕೇಳಿದ್ದಾರೆ. ಎಸ್.ಪಿ. ಹೇಳಿದ್ದಾರೆ, ಮಿನಿಸ್ಟರ್ ಹೇಳಿದ್ದಾರೆ. ಆದರೂ ಅವನು ಅವಕಾಶ ಕೊಡಲಿಲ್ಲ, ನಾನು ಅನಿವಾರ್ಯವಾಗಿ ಹೋದೆ. ಇಲ್ಲವೇ ಹೋದರೆ ಅವತ್ತು ಕ್ಲಾಷ್ ಆಗುತ್ತಿತ್ತು. 30 ಮನೆ ಇದೆ ಪಾಪ ಅವರದು. ಅಲ್ಲಿ ಮೂರು ಸಾವಿರ ಇರತಕ್ಕಂಥದ್ದು. ಇವರೆಲ್ಲ ನಮ್ಮ ಸ್ನೇಹಿತರಿಗೆ ಪ್ರಾರ್ಥನೆಗೆ ಅವಕಾಶ ಕೊಡಲಿಲ್ಲ, ಅದಕ್ಕೆ ಗಲಾಟೆ ಮಾಡಿದೆವು ಅಂದರು. ನಾನು ಹೇಳಿದೆ ಇದೆಲ್ಲಾ ಮಾಡಬೇಡಿರಪ್ಪ. ಹೈದರಾಲಿ ಯುದ್ಧ ಭೂಮಿಯಲ್ಲಿ ಬಟ್ಟೆ ಹಾಕಿಕೊಂಡು ಪ್ರಾರ್ಥನೆ ಮಾಡಿದ, ನೀನು ಮಾಡು ಪರವಾಗಿಲ್ಲ, ನಿನ್ನಿಂದ ಇಲ್ಲಿ ಗಲಾಟೆ ಯಾವುದು ಬೇಡ ಎಂದು ಹೇಳಿ ಬಂದೆ. ನಾನು ಪುನಃ ಮಂತ್ರಿಗಳ ಗಮನಕ್ಕೆ ತರಲಿಲ್ಲ. ನಾನು ಏಕೆ ಹೇಳುತ್ತಿದ್ದೇನೆಂದರೆ, ಇಲ್ಲೇನು ಎಂದರೆ ಏನೋ ಒಂದು ಗುಂಪಿನವರು ಗಲಾಟೆ ಹಬ್ಬಿಸುವವರಿದ್ದಾರೆ. ಇನ್ನೊಂದು ಗುಂಪಿನವರು ತಪ್ಪಿಸುವವರಿದ್ದಾರೆ. ಈ ಅರ್ಥ ಬರುವ ಹಾಗೆ ನಾವು.....

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಹೇಳುತ್ತೇನೆ ಕೇಳಿ.

SRI H.N. NANJEGOWDA : Again he is repeating the same mistake. This I don't like.

ಅಧ್ಯಕ್ಷರು : ನಂಜೇಗೌಡರೆ I never wish a situation arises in this House wherein I will have to tender advice to very senior Members who have been Hon'ble Members of this House much earlier to I entered this House. ನನ್ನ ಅತ್ಯಂತ ಪ್ರಮಾಣಿಕ ಅನಿಸಿಕೆ ತಮಗೆ ಹೇಳುತ್ತಿದ್ದೇನೆ. ವೈಚಾರಿಕ ಭಿನ್ನಾಭಿಪ್ರಾಯಗಳನ್ನು ನಾವು ಬಹಳ ವೈಯಕ್ತಿಕವಾಗಿ ತೆಗೆದುಕೊಂಡು ನಮ್ಮ ಸಮತೋಲನವನ್ನು ಎಲ್ಲೋ ಒಂದು ಕಡೆ ಕಳೆದುಕೊಂಡರೆ ಇಡೀ ಸದನದ ವಾತಾವರಣವೇ ಕಲುಷಿತ ಆಗಿಬಿಡುತ್ತದೆ. ದಯಮಾಡಿ ಈ ಒಂದು ಹಿನ್ನಲೆಯನ್ನು ಮನಸ್ಸಿನಲ್ಲಿಟ್ಟುಕೊಂಡು ನಾವು ಮುಂದಕ್ಕೆ ಹೋಗಬೇಕು. ನಡೆಸಬೇಕಾಗಿರತಕ್ಕಂಥಹ ಕಾರ್ಯಕಲಾಪಗಳು ಇನ್ನೂ ಬಹಳ ಇದ್ದಾವೆ. ತಾವೆಲ್ಲರೂ ನನಗೆ ಗೈಡ್ ಮಾಡಬೇಕಾಗಿರತಕ್ಕವರೇ ಹೊರತು ನಾನು ತಮಗೆ ಹೇಳತಕ್ಕಂಥಹ ಪ್ರಮೇಯ ಇಲ್ಲಿ ಉದ್ಭವವಾಗಬಾರದು ಎಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್.ಎನ್. ನಂಜೇಗೌಡ : ನನ್ನ ವಿನಂತಿ ಏನೆಂದರೆ, ನಮ್ಮ ನಡಾವಳಿಯಿಂದ ಹೊರಗಡೆ ಪ್ರಕ್ಷುಬ್ಧ ವಾತಾವರಣ ಉಂಟಾಗಕೂಡದು ಶಮನವಾಗಬೇಕು. ಪ್ರಕ್ಷುಬ್ಧ ವಾತಾವರಣ ಇದ್ದರೆ ಅದನ್ನು ಪ್ರಕ್ಷುಬ್ಧ ಮಾಡತಕ್ಕಂಥಹ ಕಾರ್ಯ ನಮ್ಮಿಂದ ಆಗಬಾರದು, ಖರ್ಗೆಯವರಿಂದ ಆಗಬಾರದು. ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿಯಲ್ಲಿ ಶಾಂತ ವಾತಾವರಣ ನಿರ್ಮಾಣವಾಯಿತು ಅಂತ ಹೇಳಿ ನಾವೆಲ್ಲರೂ ಸಮಾಧಾನಕರವಾದಂಥ ತೀರ್ಮಾನಕ್ಕೆ ಬಂದಿದ್ದೆವು. ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಶಾಂತ ವಾತಾವರಣಕ್ಕೆ ಬಹಳ ಪ್ರಯತ್ನ ಮಾಡಿದರು. ಜೊತೆಯಲ್ಲಿ ಎಲ್ಲಾ ವಿರೋಧಪಕ್ಷಗಳನ್ನು ಕರೆದು ಕುಳಿತು ಮಾತನಾಡಿ ಈ ಈದ್ಗಾ ಮೈದಾನದ್ದು ನಿಜವಾಗಲೂ ಬಹಳ ಒಂದು ರೀತಿಯಲ್ಲಿ ಅದನ್ನು ಪ್ರಸಂಶೆ ಮಾಡಲೇಬೇಕು. ಅದರಲ್ಲಿ ಎರಡು ಅಭಿಪ್ರಾಯ ಇಲ್ಲ. ಅದಕ್ಕೆ ವಿರೋಧಪಕ್ಷಗಳೂ ಹೊಣೆ. ಎಲ್ಲರೂ ಈ ಮಾತಿನಂತೆ ನಡೆದೆವು. ಆದರೆ ಇವತ್ತು ಹೃದಯ ಹೃದಯಗಳು ಒಂದಾಗಿರಬೇಕು ಎಂದು ನಾವು ಈ ಸದನದ ಮೂಲಕ ಆ ಜನರಿಗೆ ಹೇಳತಕ್ಕಂಥಹ ಅತ್ಯಂತ ಪ್ರಾಮಾಣಿಕವಾದಂಥ ಮನವಿ, ಇದು ಒಂದು ಕಡೆ. ನಿನ್ನೆ ನಡೆದ ಗೋಲೀಬಾರ್ ಪ್ರಕರಣ ಏನಿದೆ ಇದಕ್ಕೆ ಹೊಣೆ ಯಾರು? ಜನರಿಗಿಂತ ನೇರವಾಗಿ ಪೋಲೀಸ್‌ನವರೇ ಹೊಣೆ. ಅದರಲ್ಲಿ ಏನೂ ಎರಡನೇಯ ಅಭಿಪ್ರಾಯವಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಆದರೆ ಪೋಲೀಸ್‌ನವರು ಹೊಣೆ ಇರುತ್ತಾರೆ, ಅದಕ್ಕೆ ಕಾರಣೀಭೂತರಾದಂತಹ ಜನರು ಹೊಣೆ ಇರುತ್ತಾರೆ. ಅವರನ್ನೂ ಹುಡುಕಬೇಕು, ಅವರನ್ನೂ ಬಲಿತೆಗೆದುಕೊಳ್ಳಬೇಕು. ಪೋಲೀಸ್‌ನವರಿಗೆ ಮಾತ್ರ ಹೇಳಿ ಆ ಜನ ಯಾರು ಪ್ರಚೋದನೆ ಕೊಟ್ಟಿದ್ದಾರೆ ಅವರಿಗೆ ಶಿಫಾರಸ್ಸು ಕೊಡತಕ್ಕಂಥ ಕೆಲಸ ನಾವು ಮಾಡಬಾರದು.

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳುತ್ತೇನೆ, ಇನ್ನು ನಾನು ಏನೂ ಮುಂದಕ್ಕೇ ಹೋಗಿಲ್ಲ, ನೀವು ತಕ್ಷಣ ಎದ್ದರಲ್ಲ ನಾನು ಏನು ಮಾಡಲಿ. ಅದೇ ಬಂದಿದ್ದು ತಾಪತ್ರಯ. ಆದರೆ ಮುಂದಕ್ಕೆ ಹೋಗಲಿಕ್ಕೇ ಬಿಡುತ್ತಾ ಇಲ್ಲವಲ್ಲ.

ಅಧ್ಯಕ್ಷರು : ನೀವು ಕೆಲವು ಸಲ ನಂಜೇಗೌಡರ ಜೊತೆಯಲ್ಲಿರುತ್ತೀರಿ, ಕೆಲವು ಸಲ ಮೊಯ್ಲಿಯವರ ಜೊತೆಯಲ್ಲಿರುತ್ತೀರಿ. ಹಾಗಾಗಿ ಅವರಿಗೆ ಏನಾಗುತ್ತದೆಂದರೆ ನೀವು ಯಾರ ಪರವಾಗಿ ಮಾತನಾಡುತ್ತೀರೋ ಎಂದು ಅನುಮಾನಕ್ಕೆ ಎಡೆಕೊಡುವ ಮೊದಲೇ.....

ಶ್ರೀ ಚಂದ್ರಕಾಂತ ಜಿ. ಬೆಲ್ಲದ್ : ಇಲ್ಲಿ ಸದನದಲ್ಲಿರತಕ್ಕಂಥಹ ಜನರೇ ಈ ದೇಶದಲ್ಲಿ ಜನತೆ ಶಾಂತತೆಯಿಂದ ಇರಲಿಕ್ಕೆ ನಾವು ಬಿಟ್ಟುಕೊಡಬೇಕಾಗಿದೆ. ಆ ಅವಕಾಶವನ್ನು ಮಾಡಿಕೊಡುವ ಬಗ್ಗೆ ಸದಸ್ಯರು ಚಿಂತನೆಯನ್ನು ಮಾಡಬೇಕು. ತಾವೇ ಇಲ್ಲಿ ನಿಂತುಕೊಂಡು ಮತ್ತೆ ದೇಶದಲ್ಲಿ.....

ಅಧ್ಯಕ್ಷರು : ಆಯಿತು ಬೆಲ್ಲದ್‌ರವರೆ. ಈಗ ವಾಟಾಳ್ ನಾಗರಾಜ್‌ರವರು ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್ : ಆದ್ದರಿಂದ ನಾನು ಪಾಪ ಮೊಯ್ಲಿಯವರು ಹೇಳಿದರು ಎಂದು ಹೇಳಲಿಲ್ಲ. ನಾನೇನೂ ಜನರು ಹೊಣೆ ಅಲ್ಲ ಅಂತ ಹೇಳಲೇ ಇಲ್ಲ ಅದನ್ನು.

ಶ್ರೀ ಎಂ. ವೀರಪ್ಪ ಮೊಯ್ಲಿ : ಹೇಳಿ ಬಿಟ್ಟರಿ, ಹೇಳಿ ಬಿಟ್ಟರಿ.

ಶ್ರೀ ವಾಟಾಳ್ ನಾಗರಾಜ್ : ಎಲ್ಲಿ ಸುಮ್ಮನೆ ಇಲ್ಲದೇ ಇದ್ದದ್ದು ಹೇಳುತ್ತೀರಿ. ಹೇಳಿಬಿಟ್ಟರಿ ಹೇಳಿಬಿಟ್ಟರಿ ಅನ್ನುತ್ತಿರುತ್ತೀರಿ ಸುಮ್ಮನೆ. ಎಲ್ಲಿ ಹೇಳಿದ್ದೇನೆ. ಇದು ಒಳ್ಳೆ ಕಥೆಯಾಯಿತಲ್ಲ. ಸುಮ್ಮನೆ ನಾನು ಹೇಳಲಿಲ್ಲ ಅಂದರೂ ನೀವು ಹೇಳಿದಿರಿ ಎಂದು ಹೇಳುತ್ತೀರಿ. ಅದು ಅಲ್ಲ ಪ್ರಶ್ನೆ ಇದಕ್ಕೆ ಹೊಣೆ ಯಾರು? ಈ ಪರಿಸ್ಥಿತಿ ನಿರ್ಮಾಣವಾಗತಕ್ಕಂಥ ವ್ಯವಸ್ಥೆ ಏನು? ಇದು ಎಲ್ಲ ಜಾಗರೂಕತೆಯಿಂದ ಎಚ್ಚರ ವಹಿಸಬೇಕಾದವರು ಯಾರು? ಏಜೆನ್ಸಿ ಯಾವುದು? ಪೋಲೀಸರು ತಕ್ಷಣ ಪೋಲೀಸ್‌ನವರು, ನಮ್ಮನ್ನು ಬೈದರಲ್ಲ ಎನ್ನತಕ್ಕದ್ದು..... ನೆನ್ನೆ ನಾನು ಪತ್ರಿಕೆಯಲ್ಲಿ ಬಂದಿರುವ ಪ್ರಕಾರ ನೋಡಿದೆ. ಮೊದಲನೆಯದು ಲಾಠಿ ಚಾರ್ಜು ಮಾಡಿದ್ದೇವೆ ಅದಕ್ಕೆ ಶಾಂತವಾಗಲಿಲ್ಲ, ಎರಡನೆಯದು ಟಿಯರ್ ಗ್ಯಾಸ್ ಹೊಡೆದೆವು, ಶಾಂತವಾಗಲಿಲ್ಲ, ಮೂರನೆಯದು ಗೋಲೀಬಾರ್. ಇದು ಅವರ ಸಿದ್ಧಾಂತ. ಪೋಲೀಸ್‌ನವರು ಅಷ್ಟು ಸುಲಭವಾಗಿ ತಾಳ್ಮೆಯಿಂದ ಲಾಠಿ ಚಾರ್ಜು ಮಾಡಿ, ಟಿಯರ್ ಗ್ಯಾಸ್ ಮಾಡಿ, ಗೋಲೀಬಾರ್ ಹೋಗುವುದಿಲ್ಲ. ಏಕ್‌ದಂ ಗೋಲೀಬಾರ್ ಅವರದು. ನನಗೆ ಅನುಭವ ಗೊತ್ತಿದೆ. ಅದರ ಬಗ್ಗೆ ಸುಮ್ಮನೆ ಏಕೆ? ನಾನೊಂದು 35 ವರ್ಷ ಇವರ ಪರಿಸ್ಥಿತಿಗಳನ್ನು ನೋಡಿದ್ದೇನೆ. ಇದು ಏನು ಎಂದರೆ, ಗೋಲೀಬಾರ್ ಮಾಡಬೇಕಾದರೆ ಯಾವ ಯಾರ ನೀತಿ ನಿಯಮಗಳಿವೆ ಅಂತ ನಾವು ನಾಳೆ ಇಲ್ಲಿ ಕೇಳುತ್ತೇವೆ ಅಂತ ಹೇಳಿ ಅದಕ್ಕೆ ಏನು ಮಾಡಿದರು ಅಂದರೆ ನೇರವಾಗಿ ಪತ್ರಿಕೆಗಳಿಗೆ ಪೋಲೀಸಿನವರೇ ಹೇಳಿಬಿಟ್ಟರು. ಮೊದಲು ಲಾಠಿ ಚಾರ್ಜು ಮಾಡಿದೆವು ನಂತರ ಟಿಯರ್‌ಗ್ಯಾಸ್, ಆಮೇಲೆ ಗೋಲೀಬಾರ್ ಮಾಡಿದೆವು ಎಂದು ಹೇಳಿಬಿಟ್ಟರು. ನಾನು ತಮಗೆ ಏನು ಹೇಳುತ್ತಿದ್ದೇನೆಂದರೆ, ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡುತ್ತಾ ಇದ್ದೇನೆ. ಈ ಪರಿಸ್ಥಿತಿ ಮೊನ್ನೆ ತಾನೆ ಶಾಂತವಾಗಿದೆ. ಧ್ವಜಾರೋಹಣದ್ದು ಬಹಳ ತಿಳಿ ವಾತಾವರಣ ಬಂದಿದೆ. ಬಂದ ನಂತರ ಈ ಒಂದು ವರ್ಷವಾದರೂ ನಾವು ಅಲ್ಲಿ ಒಂದು ವ್ಯವಸ್ಥಿತವಾಗಿ ಕಾದು ಮುಂದೆ ಏನಾಗಬಹುದು, ಯಾವ ಪರಿಸ್ಥಿತಿ ಆಗಬಹುದು ಎಂದು ನೋಡಿದರೆ ಈ ಪ್ರಕರಣ ಬರುತ್ತಿರಲಿಲ್ಲ. ಆದ್ದರಿಂದ ತಾವು ಪ್ರಾಮಾಣಿಕವಾಗಿ ಇದಕ್ಕೆ ಸಂಬಂಧಪಟ್ಟಂತೆ ಯಾರು ಯಾರು ಇದ್ದಾರೆ ಅವರ ಬಗ್ಗೆ ಕಳಕಳಿಯಿಂದ ತಮ್ಮಲ್ಲಿ ನಾನು ಮನವಿ ಮಾಡುತ್ತಾ ಇದ್ದೇನೆ, ಈ ಬಗ್ಗೆ ತೀವ್ರವಾದಂತಹ ಕ್ರಮ ಕೈಗೊಳ್ಳಬೇಕು. ಮತ್ತೊಂದು ನ್ಯಾಯಾಂಗ ತನಿಖೆ. ಬೆಳಿಗ್ಗೆ ತಾವು ಸದನಕ್ಕೆ ಬಂದಿರಲಿಲ್ಲ, ನಾನು ಹೇಳಿ ಸಭಾತ್ಯಾಗ ಮಾಡಿದೆ. ನ್ಯಾಯಾಂಗ ತನಿಖೆಯಾಗಬೇಕು ಎನ್ನತಕ್ಕಂಥದ್ದು ನನ್ನ ಒತ್ತಾಯ ಮತ್ತು ಈಗ ಯಾರು ಗಾಯಗೊಂಡಿದ್ದಾರೆ ಯಾವ ಸಮಾಜದವರೇ ಆಗಿರಲಿ ಅವರು ಯಾವ ಕೋಮಿನವರೇ ಆಗಿರಲಿ. ಗಾಯಗೊಂಡವರಿಗೆ, ಸತ್ತಿರುವವರಿಗೆ ಪರಿಹಾರವನ್ನು ತಾವು ಈಗಲೇ

ಘೋಷಣೆ ಮಾಡಬೇಕು. ಮತ್ತೆ ಮುಂದೆ ಇದು ಮರುಕಳಿಸದಂತೆ ಏನು ಕ್ರಮವನ್ನು ತೀವ್ರವಾಗಿ ಕೈಗೊಂಡಿದ್ದೀರಿ ಅದನ್ನು ಮಾಡಬೇಕು ಎಂದು ತಮ್ಮ ಮೂಲಕ ಕಳಕಳಿಯಿಂದ ಮನವಿ ಮಾಡಿ ಈ ಬಗ್ಗೆ ಅಲ್ಲಿ ಏನು ವಾತಾವರಣ ನಡೆದಿದೆ ಎಂಬ ಬಗ್ಗೆ ಸವಿಸ್ತಾರವಾದಂಥ ಒಂದು ಹೇಳಿಕೆಯನ್ನು ಸಹ ಈ ಸದನದ ಮುಂದೆ ತಾವು ಕೊಡಬೇಕೆಂದು ಕೇಳಿ ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ.

1.40 ಪಿ.ಎಂ

SRI QUMARUL ISLAM : Mr Speaker Sir,....

ಅಧ್ಯಕ್ಷರು : ದಯವಿಟ್ಟು ಕೇಳಿ, ಈ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಅವರು ರಿಪ್ಲೈ ಮಾಡಬೇಕಾಗುತ್ತದೆ. ಪ್ರಿಲಿಮಿನರಿ ಸಬ್ಮಿಷನ್‌ಗೆ ಇನ್ನೂ ಸ್ವಲ್ಪ ಆ್ಯಡ್ ಮಾಡುತ್ತೀರೆಂದು....

SRI QUMURAL ISLAM : I have also signed on the adjournment motion which has been given.

MR. SPEAKER : I should not be misled. I don't want to be misled. It is not fair.

SRI QUMURAL ISLAM : For the wisdom of the House, I wanted to add certain new points which have come to my notice.

MR. SPEAKER : It has become endless. Listen tome.

SRI QUMURAL ISLAM : I request....

ಅಧ್ಯಕ್ಷರು : ಕಮ್ರೂಲ್ ಇಸ್ಲಾಂರವರೇ ದಯವಿಟ್ಟು ಕೇಳಿ. ನಿನ್ನೆಯ ದಿವಸ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮಾನ್ಯ ವೀರಪ್ಪಮೊಯಿಲಿಯವರು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ಪ್ರಾಸ್ತಾವಿಕವಾಗಿ ಅವರು ಹೇಳಬೇಕಾದ್ದನ್ನೆಲ್ಲಾ ಹೇಳಿದ್ದಾರೆ. ಮಾನ್ಯ ಸಭಾನಾಯಕರು ಇವತ್ತು ಉತ್ತರ ಕೊಡಬೇಕಾದ ಹಂತವನ್ನೂ ತಲುಪಿದ್ದೇವೆ. ಈ ಮಧ್ಯೆ ಹುಬ್ಬಳ್ಳಿಯಲ್ಲಿ ಒಂದು ಘಟನೆ ಏನು ಆಗಿದೆ ಅದನ್ನೂ ತಿಳಿಸಿದರೆ ಅದಕ್ಕೂ ಸೇರಿಸಿ ಒಟ್ಟಿಗೇ ಉತ್ತರವನ್ನು ಕೊಡಲಿ ಎಂದು ಮಾನ್ಯ ಖರ್ಗೆಯವರು ಹೇಳಿದರು. ಅವರು ಕೊಟ್ಟಿರತಕ್ಕ ಸೂಚನೆಗೆ ತಾವು ಸಹಿ ಹಾಕಿಲ್ಲ. ತಾವೂ ಮತ್ತು ಶ್ರೀಮಾನ್ ಶ್ರೀರಾಮ ರೆಡ್ಡಿ ಹಾಗೂ ಇತರೆ ಸದಸ್ಯರು ಏನಾದರೂ ಕೇಳಬೇಕಾಗಿದ್ದರೆ ಮಾನ್ಯ ಸಭಾ ನಾಯಕರು ಉತ್ತರವನ್ನು ಕೊಟ್ಟಮೇಲೆ ಕ್ಲಾರಿಫಿಕೇಷನ್ ರೂಪದಲ್ಲಿ ಕೇಳಿ. ನಿಯಮಾವಳಿಯ ಪ್ರಕಾರ ಈ ಸೂಚನೆಗೆ ಯಾರ್‍ಯಾರು ಸಹಿ ಹಾಕಿಲ್ಲ. ಅವರನ್ನೆಲ್ಲಾ ಮಾತನಾಡುವುದಕ್ಕೆ ಬಿಟ್ಟರೆ ಹೊಸ ಸಂಪ್ರದಾಯವನ್ನು ನಾನು ಹಾಕಿದಂತಾಗುತ್ತದೆ. I don't want to be guilty of committing a mistake.

ದಯವಿಟ್ಟು ನನ್ನ ಪರಿಸ್ಥಿತಿಯನ್ನು ತಾವು ಅರ್ಥಮಾಡಿಕೊಳ್ಳಿ. ಮಾನ್ಯ ಸಭಾ ನಾಯಕರು ದಯವಿಟ್ಟು ನಿಲುವಳಿ ಸೂಚನೆಗೆ ಉತ್ತರವನ್ನು ಕೊಡಬೇಕು.

SRI QUMARUL ISLAM : I will ask only clarification.

ಅಧ್ಯಕ್ಷರು : ಮಾನ್ಯ ಸಭಾ ನಾಯಕರು ದಯವಿಟ್ಟು ಉತ್ತರ ಕೊಡಬೇಕು.

+ ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಿನ್ನೆ ಈ ಸದನದಲ್ಲಿ ರಾಜ್ಯದ ಕಾನೂನಿನ ಪರಿಸ್ಥಿತಿ ಹದಗೆಟ್ಟಿದೆ ಎಂಬ ಬಗ್ಗೆ ಚರ್ಚೆ ಮಾಡುವುದಕ್ಕೆ ಸದನದ ಕಾರ್ಯಕಲಾಪಗಳನ್ನು ಮುಂದೂಡಿ ನಮಗೆ

ಅವಕಾಶವನ್ನು ಕೊಡಬೇಕೆಂದು ನಿಯಮ 60ರ ವ್ಯಾಪ್ತಿಯಲ್ಲಿ ಮಾನ್ಯ ಖರ್ಗೆಯವರು ಹಾಗೂ ಇನ್ನೂ ಕೆಲವು ಗೌರವಾನ್ವಿತ ಸದಸ್ಯರು ತಮ್ಮ ಅನುಮತಿಯನ್ನು ಕೇಳಿದ್ದಾರೆ. ತಾವು ಅನುಮತಿಯನ್ನು ಕೊಡುವುದರ ಬಗ್ಗೆ ತಮ್ಮ ಮನಸ್ಸನ್ನು ಒಲಿಸುವುದಕ್ಕೋಸ್ಕರವಾಗಿ ಕೆಲವು ನಿದರ್ಶನಗಳನ್ನು ಕೊಡುವುದರ ಮುಖಾಂತರ ತಮ್ಮ ಅನುಮತಿಯನ್ನು ಪಡೆದುಕೊಳ್ಳಲು ಪ್ರಯತ್ನ ಮಾಡಿದ್ದಾರೆ. ಆ ಹಿನ್ನೆಲೆಯಲ್ಲಿ ನಾಲ್ಕಾರು ಪ್ರಾಮುಖ್ಯವಾದ ವಿಷಯಗಳನ್ನು ನಿನ್ನೆ ದಿವಸ ಚರ್ಚೆ ಮಾಡಿ ತಮ್ಮ ಅಂತಿಮ ತೀರ್ಮಾನವನ್ನು, ಸಮ್ಮಿತಿಯನ್ನು ಕೊಡಬೇಕೆಂದು ಕೇಳಿದ್ದಾರೆ. ನಾನು ಆ ಎಲ್ಲಾ ವಿಷಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಅಲ್ಲದೆ ಎಲ್ಲಾ ವಿಚಾರಗಳಿಗೂ ಸುದೀರ್ಘವಾದ ಉತ್ತರವನ್ನೂ ಕೂಡ ಕೊಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಮುಂದಿನ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಇನ್ನೂ ಹಲವಾರು ವಿಚಾರಗಳನ್ನು ಕಾನೂನಿನ ಸುವ್ಯವಸ್ಥೆ, ಅವ್ಯವಸ್ಥೆಯ ಬಗ್ಗೆ ಮಾತನಾಡುವುದಕ್ಕೆ ಮಾನ್ಯ ಸದಸ್ಯರಿಗೆ ಅವಕಾಶವಿದೆ. ಆ ಸಂದರ್ಭದಲ್ಲಿ ಸಾಧ್ಯವಾಗದೆ ನಾನು ಇನ್ನೂ ಸವಿಸ್ತಾರವಾಗಿ ಉತ್ತರವನ್ನು ಕೊಡುವುದಕ್ಕೆ ಸಿದ್ಧವಾಗಿದ್ದೇನೆ. ಆದರೆ ನಿನ್ನೆ ಈ ಸದನದಲ್ಲಿ ಎತ್ತಿದಂಥ ನಾಲ್ಕಾರು ಪ್ರಾಮುಖ್ಯವಾದ ವಿಷಯಗಳ ಬಗ್ಗೆ ಮಾತ್ರ ಸೀಮಿತವಾಗಿ ಸರ್ಕಾರದ ನಿಲುವು ಏನೆಂಬ ಬಗ್ಗೆ ನಾನು ಇವನ್ನು ತಮ್ಮ ಅನುಮತಿ ಪಡೆದು ಸಭೆಯ ಮುಂದಿಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಮಾನ್ಯ ಖರ್ಗೆಯವರು ಎತ್ತಿದಂಥ ವಿಷಯ ಹುಬ್ಬಳಿಯಲ್ಲಿ ಆದಂಥ ರಾಜಾ ಆಚಾರ್‌ರವರ ಕೊಲೆಯ ಬಗ್ಗೆ. ಎರಡನೆಯದಾಗಿ ಕುರುಡಗಿ ಘಟನೆಗಳ ಬಗ್ಗೆ, ಮೂರನೆಯದು ಗುರುಮಿರ್‌ಕಲ್‌ನ ಪೋಲೀಸರ ವರ್ಗಾವಣೆಯ ಬಗ್ಗೆ, ನಾಲ್ಕನೆಯದಾಗಿ ರಸ್ತೆಗಳಲ್ಲಿ ಡಕಾಯಿತಿಗಳ ವಿಷಯ ಬೆಂಗಳೂರು ನಗರದಲ್ಲಿ ವಿಜಯನಗರದ ರೌಡಿಗಳ ಹಾವಳಿ, ಹಾಸನದಲ್ಲಿ ಹರಿಜನರ ಮೇಲೆ ದೌರ್ಜನ್ಯ, ಎಸ್.ಪಿ. ಸೋಮಶೇಖರ್‌ರವರ ಘಟನೆ, ಹೀಗೆ ಇನ್ನೂ ನಾಲ್ಕಾರು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

1.40 ಪಿ.ಎಂ

ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿಯ ರಾಜಾ ಆಚಾರ್‌ರವರ ಕೊಲೆಗೆ ಸಂಬಂಧಪಟ್ಟಂತೆ ಕೆಲವು ಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ. ರಾಜಾ ಆಚಾರ್‌ರವರ ಕೊಲೆಯಾದ ಮೇಲೆ ಅದಕ್ಕೆ ಸಂಬಂಧಪಟ್ಟಂತೆ ಒಬ್ಬ ವ್ಯಕ್ತಿಯನ್ನು ದಸ್ತಗಿರಿ ಮಾಡಲಾಗಿದೆ, ಅವರು ತಪ್ಪಿಸಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಹೇಳುವುದಾದರೆ, ಅನಿಲ್‌ಕುಮಾರ್ ಎನ್ನುವವರ ಬಗ್ಗೆ ನೀವು ಕೋರ್ಟ್‌ನ ಆಜ್ಞೆಯನ್ನು ಉಲ್ಲೇಖ ಮಾಡಿದಿರಿ ಅದು ಈ ಕೇಸಿಗೆ ಸಂಬಂಧಪಟ್ಟ ವಿಷಯವಲ್ಲ. ಹುಬ್ಬಳ್ಳಿ ನಗರದಲ್ಲಿ ಅನಿಲ್ ಕುಮಾರ್‌ರ ಮತ್ತು ಅವರ ಸಂಗಡಿಗರು ಬಂದ್‌ಗೆ ಏನು ಕರೆ ಕೊಟ್ಟರು ಅದಕ್ಕೆ ಮೊದಲನೇ ದಿವಸ ಬೆಂಬಲ ಸಿಕ್ಕಲಿಲ್ಲ. ಮತ್ತೆ ಎರಡನೇ ದಿವಸ ಬಂದ್‌ಗೆ ಕರೆಕೊಟ್ಟರು. ಎರಡನೆ ದಿವಸ ಕೂಡ ಆ ಹುಬ್ಬಳ್ಳಿ ನಗರದ ಮಹಾ ಜನತೆ ಯಾವುದೇ ಶಕ್ತಿ, ಅಥವಾ ಬೆಂಬಲವನ್ನು ಕೊಡಲಿಲ್ಲ. ಆ ಹಿನ್ನೆಲೆಯಲ್ಲಿ ಅಲ್ಲಿಯ ಅಂಗಡಿಗಳನ್ನು ಬಲವಂತವಾಗಿ ಮುಚ್ಚಿಸಬೇಕೆಂದು ಹೋದಾಗ ಅಲ್ಲಿ ಸ್ವಲ್ಪ ಮಟ್ಟಿಗೆ ಘರ್ಷಣೆಯಾಗಿದೆ. ಗಾಳಿಯಲ್ಲಿ ಅವರು ಗುಂಡನ್ನು ಹಾರಿಸಿದ್ದಾರೆ. ಆ ಹಿನ್ನೆಲೆಯಲ್ಲಿ ಅವರ ಮೇಲೆ ಸೆಕ್ಷನ್ 107ರ ಪ್ರಕಾರ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿದಾಗ ತಾವು ಹೇಳಿದಂತೆ ಸಂಬಂಧಪಟ್ಟ ನ್ಯಾಯಾಲಯದ ತೀರ್ಪಿನ ಉಲ್ಲೇಖ ಮಾಡಿದಿರಿ ಆ ಸಂದರ್ಭದಲ್ಲಿ, ಅವರು ಮಾಡಿರತಕ್ಕ ಅಬ್ಸರ್ವೇಶನ್ನೇ ಹೊರತು ಈ ಕೊಲೆಯ ಮೊಕದ್ದಮೆಗೆ ಸಂಬಂಧಪಟ್ಟಂತೆ ಅಲ್ಲವೆಂಬುದನ್ನು ನಾನು ಸ್ಪಷ್ಟೀಕರಣ ಮಾಡುವುದಕ್ಕೆ ಇಷ್ಟಪಡುತ್ತೇನೆ. ಯಾವುದೇ ಕಾರಣದಿಂದಲೂ ನಾವು ತಪ್ಪಿತಸ್ಥರನ್ನು ಹಿಡಿಯುವ ವಿಚಾರದಲ್ಲಿ ಹಿಂದೆ ಬೀಳುವುದಿಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಸರ್ಕಾರ ಅವಶ್ಯಕವಾದ ಎಲ್ಲಾ ಕ್ರಮಗಳನ್ನೂ ತೆಗೆದುಕೊಳ್ಳುವುದಕ್ಕೆ ಸಿದ್ಧವಿದೆ ಎಂಬ ಮಾತನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಕೊಪ್ಪಿಗಿ ಘಟನೆಯ ಬಗ್ಗೆ ಹೇಳುವುದಾದರೆ, ಅಲ್ಲಿ ಏನಾಗಿದೆ, ಅದರಲ್ಲಿ ನಾವು ಯಾವುದೇ ರಾಜಕಾರಣವನ್ನೂ ಸೇರಿಸಬೇಕಾದ ಅವಶ್ಯಕತೆ ಇಲ್ಲ. ಯಾವುದೇ ನಾಗರೀಕರ ಮೇಲೆ ಅತಿರೇಕದ ಹಲ್ಲೆಗಳಾದಾಗ ಕಾನೂನು ರಕ್ಷಣೆ ಮಾಡತಕ್ಕ ಅಧಿಕಾರಿಗಳೇ ತಮ್ಮ ಎಲ್ಲೆಕಟ್ಟನ್ನು ಮೀರಿ ವರ್ತನೆ ಮಾಡಿದಾಗ ಅದಕ್ಕೆ ನಾವು ಪೋಲೀಸ್ ಎಕ್ಸೆಸ್ ಎಂದು ಕರೆಯುತ್ತೇವೆ. ಯಾರು ಆ ಘಟನೆಗೆ ಒಳಗಾಗಿದ್ದಾರೆ ಅದನ್ನು ಮಂತ್ರಿಗಳ ಗಮನಕ್ಕೆ ತಂದಿದ್ದು ಅಷ್ಟೇ ಅಲ್ಲ, ಪೆಟ್ಟುತಿಂದ ಜನರೇ ನಮ್ಮ ಮುಂದೆ ಬಂದು ನಡೆದಂಥ ಘಟನೆಯನ್ನು ವಿವರಣೆಯನ್ನು ವಿವರಿಸಿದ್ದಾರೆ. ಆದರೂ ನಮ್ಮ ಹಿರಿಯ ಪೋಲೀಸ್ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಿ ವಿಚಾರಣೆ ಮಾಡಿಸಿ ಸರ್ಕಾರಕ್ಕೆ ವರದಿಯನ್ನು ಕೊಡುವಂತೆ ಹೇಳಿದ್ದೇನೆ. ಇವತ್ತು ಸಂಜೆ ಅವರು ಇಲ್ಲಿಗೆ ಬರುತ್ತಾರೆ. ಯಾವ ಅಧಿಕಾರಿ ತನ್ನ ಕರ್ತವ್ಯ ನಿರ್ವಹಣೆ ಮಾಡತಕ್ಕ ಸಂದರ್ಭದಲ್ಲಿ ತನ್ನ ಎಲ್ಲೆಕಟ್ಟನ್ನು ಬಿಟ್ಟು ಅತಿರೇಕದ ಕ್ರಮಗಳನ್ನು ತೆಗೆದುಕೊಂಡಿರುವುದು ವಿಚಾರಣೆ ಸಂದರ್ಭದಲ್ಲಿ ಅದು ಸಾಬೀತು ಆದರೆ ನಮ್ಮ ಹಿರಿಯ ಅಧಿಕಾರಿಗಳು ಯಾರು ಅಲ್ಲಿಗೆ ಹೋಗಿದ್ದಾರೆ ಅವರು ಬಂದು ತಮ್ಮ ವರದಿಯನ್ನು ಸಲ್ಲಿಸಿದ ಮೇಲೆ ಅಂಥ ತಪ್ಪಿತಸ್ಥ ಅಧಿಕಾರಿಯ ವಿರುದ್ಧ ಕ್ರಮ ತೆಗೆದುಕೊಳ್ಳುವುದರಲ್ಲಿ ನಾವು ಹಿಂದೆ ಬೀಳುವುದಿಲ್ಲವೆಂಬುದನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಮಾನ್ಯ ಸದಸ್ಯರು ಗುರುಮಿಠ್‌ಕಲ್‌ನ ಪೋಲೀಸ್‌ರ ವರ್ಗಾವಣೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನೀವು ಇದೇ ಸದನದಲ್ಲಿ ಮಾತನಾಡುವಾಗ ಹೇಳಿದಿರಿ, ನಾವು ಯಾವುದೇ ಅಧಿಕಾರಿಯನ್ನೂ ವರ್ಗ ಮಾಡುವುದಿಲ್ಲವೆಂದು ಹೇಳಿದಿರಿ ಅಂತ. ಆದರೆ ಅದನ್ನು ಪ್ರಾಸ್ತಾವಿಕವಾಗಿ ಹೇಳಿದಿರಿ. ಆದರಿಂದ ತುಂಬಾ ದೊಡ್ಡ ಅನಾಹುತ ಆಯಿತೆಂದು ನಾನು ಹೇಳುವುದಿಲ್ಲ. ಬಹುಶಃ ಈ ಸರ್ಕಾರ ಹೇಳುವುದು ಒಂದು, ಮಾಡುವುದು ಒಂದು ಎಂಬ ಭಾವನೆಯಿಂದ ನೀವು ಹೇಳಿದಿರೆಂದು ನಾನು ಭಾವಿಸುತ್ತೇನೆ. ಆದರೆ ಒಂದು ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ಸನ್ನಿವೇಶ ಏತಕ್ಕೆ ಬಂತು? ಎಂದು ತಮಗೆ ಹೇಳುತ್ತೇನೆ. ಹಿಂದೆ ತಾವು ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಈ ಅಧಿಕಾರಿಯನ್ನು ಅಲ್ಲಿಂದ ಬೇರೆ ಕಡೆ ವರ್ಗ ಮಾಡಬೇಕೆಂದು ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ಚುನಾವಣಾ ಕಮಿಷನ್‌ನಿಂದ ಸೂಚನೆ ಬಂದಿತ್ತು. ಈ ಅಧಿಕಾರಿಯನ್ನು ವರ್ಗ ಮಾಡಬೇಕೆಂದು ಚುನಾವಣಾ ಆಯೋಗದವರೇ ಸೂಚನೆಯನ್ನು ರಾಜ್ಯ ಸರ್ಕಾರಕ್ಕೆ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪಂಚಾಯತಿ ಚುನಾವಣೆ ನಡೆಯುವ ಕಾಲದಲ್ಲಿ ಅಲ್ಲಿಯ ಸ್ಥಳೀಯ ರಾಜಕೀಯ ಮುಖಂಡರು ಪುನಃ ಇದನ್ನು ಪ್ರಸ್ತಾಪ ಮಾಡಿದ್ದಾರೆ. ಹಿಂದೆ ಚುನಾವಣಾ ಕಮಿಷನ್‌ನವರೇ ಏನು ಹೇಳಿದ್ದಾರೆಂದರೆ, ಈ ಅಧಿಕಾರಿಯನ್ನೇ ಮುಂದುವರಿಸಿಕೊಂಡು ಚುನಾವಣೆಯನ್ನು ನಡೆಸುವುದಕ್ಕಾಗುವುದಿಲ್ಲವೆಂದು ಅವರು ಒಂದು ಮನವಿಯನ್ನು ಕೊಟ್ಟಮೇಲೆ ಅವರನ್ನು ವರ್ಗ ಕೂಡ ಮಾಡದೆ ಡೆಪ್ಯುಟೇಷನ್ ಮೇಲೆ ಬೇರೆ ಜವಾಬ್ದಾರಿಯನ್ನು ಕೊಟ್ಟು ಅದೇ ಜಿಲ್ಲೆಯನ್ನೇ ಇಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಪಾರ್ಟಿಯವರು ಬಂದು ಹೇಳಿದ ಮೇಲೆ ಅದನ್ನು ಮಾಡಿದರು. ಈಗ ನಿಮ್ಮ ಅಧಿಕಾರ ಬಂದಿದೆ, ನೀವು ಬದಲಾವಣೆ ಮಾಡಿದಿರಿ. ಇದಕ್ಕೆ ನಮ್ಮ ಅಭ್ಯಂತರವಿಲ್ಲ, ಆದರೆ ಹೇಳುವುದು ಒಂದು, ಮಾಡುವುದು ಇನ್ನೊಂದು ಎಂದು ನೀವು ಮಾಡಬೇಡಿ, ನಮಗೆ ಅವರು ಬೇಕಾಗಿಲ್ಲ. ಅವರು ನಮಗೆ ಇದ್ದರೂ ಒಂದೆ, ಇಲ್ಲದಿದ್ದರೂ ಒಂದೆ.

ಶ್ರೀ ಹೆಚ್.ಡಿ. ದೇವೇಗೌಡ : ನೀವು ಪ್ರಾಸ್ತಾವಿಕವಾಗಿ ಹೇಳಿದಿರಿ ಎಂದು ನಾನು ಹೇಳಿದೆ. ಅವರಿಂದಲೇ ನಿಮ್ಮ ರಾಜಕೀಯ, ನಿಮ್ಮ ನಾಯಕತ್ವಕ್ಕೆ ಶಕ್ತಿ ಬಂದಿದೆ ಎಂದು ನಾನು ಹೇಳಲಿಲ್ಲ. ಏಕೆಂದರೆ ಒಬ್ಬ ಅಧಿಕಾರಿಯನ್ನು ಹಿಡಿದುಕೊಂಡು ನಾನು ರಾಜಕೀಯ ಮಾಡಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಏನು ಹೇಳಬೇಕಾಗಿತ್ತೆಂದರೆ, ಇದರ ಹಿನ್ನೆಲೆ ಹೇಳಬೇಕಾಗಿತ್ತು. ಇದರಲ್ಲಿ ನಿಮ್ಮ ಪಕ್ಷದ ಮುಖಂಡರೂ ಇದ್ದಾರೆ. ಅದನ್ನೂ ಕೂಡ ನೀವು ತಿಳಿದುಕೊಳ್ಳಲಿ ಎಂಬ ಉದ್ದೇಶದಿಂದ ನಾನು ಹೇಳಿದುದ್ದು. ಅಷ್ಟೇ ಹೊರತು ಅವರನ್ನು ಅಲ್ಲೇ ಇಡಬೇಕೆಂಬ ದೃಷ್ಟಿಯಿಂದ ನಾನು ಹೇಳಲಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ನಾನು ಏನು ಹೇಳಿದೆ ಎಂದರೆ, ಸಾರ್ವತ್ರಿಕ ಚುನಾವಣೆ ಸಂದರ್ಭದಲ್ಲಿ ಇವರನ್ನು ವರ್ಗ ಮಾಡಬೇಕೆಂದು ಚುನಾವಣಾ ಕಮಿಷನ್‌ನವರು ಸರ್ಕಾರಕ್ಕೆ ಸೂಚನೆಯನ್ನು ನೀವು ಅಧಿಕಾರದಲ್ಲಿದ್ದಾಗಲೇ ಕೊಟ್ಟಿದ್ದುದನ್ನು ಹಿರಿಯ ಅಧಿಕಾರಿಗಳು ವನ್ನ ಗಮನಕ್ಕೆ ತಂದರು. ಈ ವಿಷಯವನ್ನು ನಾನು ತಿಳಿದುಕೊಳ್ಳುವುದಕ್ಕೂ ಹೋಗುತ್ತಿರಲಿಲ್ಲ. ಆದರೆ ಒಂದು ಒಂದು ಮಾತನ್ನು ಹೇಳುವುದಾದರೆ ನಿನ್ನೆ ನೀವು ಸದನದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ ಮೇಲೆ ನನ್ನ ಹತ್ತಿರ ಮಾಹಿತಿ ಇದರ ಬಗ್ಗೆ ಇಲ್ಲವೆಂದು ಈ ಸನ್ನಿವೇಶ ಹೇಗೆ ಇಲ್ಲಿ ಬಂತೆಂಬುದನ್ನು ನನ್ನ ಹಿರಿಯ ಅಧಿಕಾರಿಗಳಿಂದ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದೇ ಹೊರತು ಆ ಅಧಿಕಾರಿಯಿಂದ ರಾಜಕೀಯ ಮಾಡಿ ಇವತ್ತು ಇಷ್ಟೊಂದು ಎತ್ತರಕ್ಕೆ ಬೆಳೆಯಲಿಕ್ಕೆ ಸಾಧ್ಯವಾಗುವುದಕ್ಕೆ ನೀವು ಹೋಗುತ್ತೀರೆಂದು ನಾನು ಅಂದುಕೊಳ್ಳುವುದಿಲ್ಲ. ಪ್ರಾಸ್ತಾವಿಕವಾಗಿ ನೀವು ಮಾತನಾಡಿದಿರಿ ಎಂದು ನಾನು ಭಾವಿಸಿಕೊಳ್ಳುತ್ತೇನೆ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಆಗಮಿಸಿದರು).

ಇನ್ನು ಡಕಾಯಿತಿ ಬಗ್ಗೆ ಹೇಳುವುದಾದರೆ, ಎರಡು ಮೂರು ಡಕಾಯಿತಿಗಳು ಆಗಿರತಕ್ಕದ್ದು ನಿಜ. ಒಂದಂತೂ ಅತ್ಯಂತ ಹೇಯವಾದ ಡಕಾಯಿತಿ. ಅದನ್ನು ನಾನು ಅಲ್ಲಗಳೆಯುವುದಕ್ಕೆ ಹೋಗುವುದಿಲ್ಲ. ಒಂದು ಮೈಲಾವಾರದ ಹತ್ತಿರ ಆಗಿರತಕ್ಕದು. ಬಹುಶಃ ಇಲ್ಲಿಯವರೆಗೆ ನಡೆದಿರತಕ್ಕ ಎಲ್ಲಾ ಡಕಾಯಿತಿಗಳನ್ನು ಮೀರಿಸಿರತಕ್ಕ ಡಕಾಯಿತಿ ಅಲ್ಲಿ ನಡೆದಿದೆ ಎಂಬ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕೆ ಮುಂದೆ ಏನು ಕ್ರಮ ತೆಗೆದುಕೊಂಡಿದ್ದೇವೆಂದು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಬೆಂಗಳೂರಿನ ವಿಜಯನಗರದಲ್ಲಿ ಹಾವಳಿ ಆಯಿತು ಎಂಬುದಕ್ಕೆ ಕಾರಣ ಏನು ಎಂಬುದು ಕೇವಲ ರೌಡಿಗಳ ಬದಲಾಗಿ ಎರಡು ಗುಂಪಿನವರ ಸಂಘರ್ಷ. ಅದಕ್ಕೆ ಹಿಂದುಗಡೆ ಯಾರಿದ್ದಾರೆ ಏನು ಎಂಬುದರ ಬಗ್ಗೆ ನಾನು ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಒಂದೇ ಸಮಾಜಕ್ಕೆ ಸೇರಿದ ಎರಡು ಗುಂಪಿನ ಸಂಘರ್ಷ ಅದರಲ್ಲಿ ಇದೆ. ಅದು ಅದಕ್ಕೆ ಒಳಪಟ್ಟಿರತಕ್ಕದ್ದು. ಅವರ ಮೇಲೆ ಸರ್ಕಾರ ಕೆಲವು ಬಿಗಿಯಾದ ಕ್ರಮಗಳನ್ನು ತೆಗೆದುಕೊಂಡಿದ್ದೇವೆಂದು ತಿಳಿಸುತ್ತೇನೆ. ಹಾಸನದಲ್ಲಿ ಏನು ಒಬ್ಬ ಪರಿಶಿಷ್ಟ ಸಮಾಜದವರ ಮೇಲೆ ಹಲ್ಲೆಯಾಗಿದೆ ಅದು ಸತ್ಯಾಂಶ ಇದೆ. ಅದರ ಬಗ್ಗೆ ಸರ್ಕಾರ ಈಗಾಗಲೇ ಕೊಲೆಯ ಆರೋಪಿಯನ್ನು ಬಂಧಿಸಿದೆ. ಸರ್ಕಾರ ತನ್ನ ಕರ್ತವ್ಯದಲ್ಲಿ ಹಿಂದೆ ಬಿದ್ದಿಲ್ಲವೆಂದು ತಿಳಿಸುತ್ತೇನೆ.

ಶ್ರೀ ಸೋಮಶೇಖರ್ ಅವರ ಬಗ್ಗೆ ಬೆಳಿಗ್ಗೆ ಪ್ರಸ್ತಾಪ ಮಾಡಿದ್ದೀರಿ. ಆ ಅಧಿಕಾರಿಯ ಹಿನ್ನೆಲೆ ನಿಮಗೆ ಗೊತ್ತಿದೆ. ಅದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಅದು ದುರ್ದೈವ. ಫ್ಯಾಮಿಲಿ ಕೋರ್ಟಿನಲ್ಲಿ ನಡೆದಂಥ ಘಟನೆ ಏನಿದೆ ಅದು ಅಧಿಕಾರಿ ವೃಂದಕ್ಕೆ ತಲೆತಗ್ಗಿಸತಕ್ಕದ್ದು ಒಂದು ಕಡೆ ಆದರೆ, ಮತ್ತೊಂದು ಕಡೆ ಪರಿಹಾರ ತೆಗೆದುಕೊಳ್ಳತಕ್ಕ ಮಾರ್ಗ. ಇನ್ನೊಂದು ಪರ್ಯಾಯ ಘಟನೆ ಏನು ನಡೆಯಿತು ಅದು ಕೂಡ ಸರಿಯಾದುದಲ್ಲ. ಅದನ್ನು ಇಲ್ಲಿಗೆ ಬಿಡುತ್ತೇನೆ. ಏಕೆಂದರೆ ಈಗಾಗಲೇ ಕೇಸ್ ರಿಜಿಸ್ಟರ್ ಆಗಿ ಸಂಬಂಧಪಟ್ಟ ಎರಡೂ ಗುಂಪುಗಳ ಮೇಲೆ ತನಿಖೆ ನಡೆಯುತ್ತಿರುವುದರಿಂದ ಸರ್ಕಾರ ಪ್ರತಿಕ್ರಿಯೆ ವ್ಯಕ್ತಪಡಿಸುವುದಕ್ಕೆ ಹೋಗಿಲ್ಲ. ಆ ಅಧಿಕಾರಿಯ ಹಿನ್ನೆಲೆ ಬಗ್ಗೆ ತಮಗೆ ಸಂಪೂರ್ಣವಾಗಿ ಗೊತ್ತಿದೆ ಎಂದು

ತಿಳಿದುಕೊಂಡೇ ನಾನು ಈ ಮಾತನ್ನು ಹೇಳುತ್ತಿದ್ದೇನೆ. ತಾವು ಬೆಂಗಳೂರಿನಲ್ಲಿ ನಡೆದ ಪುರುಷೋತ್ತಮನ ಕೊಲೆಯ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಇದರಲ್ಲಿ ನಾನು ಇಷ್ಟೇ ತಮ್ಮ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಂತ್ರಿಗಳ ಕಾರಿನಲ್ಲಿ ಶವವನ್ನು ತೆಗೆದುಕೊಂಡು ಹೋದರು ಎಂದು ಆಪಾದನೆ. ಆದರೆ ನಾನು ಇಷ್ಟು ಹೇಳುವುದಕ್ಕೆ ಇಷ್ಟಪಡುತ್ತೇನೆ, ಅದು ಸತ್ಯಕ್ಕೆ ದೂರವಾದ ಮಾತು. ಮಂತ್ರಿಯವರ ಕಾರನ್ನು ಬಳಕೆ ಮಾಡಲಿಲ್ಲ. ಅಷ್ಟೇ ಅಲ್ಲ, ಆ ಬಗ್ಗೆ ಪೋಲೀಸ್ ವರದಿ ಕೂಡ ಇಲ್ಲ. ಅದನ್ನು ಯಾವುದೇ ಮುಚ್ಚುಮರೆ ಇಲ್ಲದೆ ಹೇಳಬೇಕಾಗುತ್ತದೆ. ನಿಮಗೆ ಬಂದಿರತಕ್ಕ ವರದಿ ಏನಿದೆ ಅದು ಸತ್ಯಕ್ಕೆ ದೂರವಾದ ವರದಿ. ಅದು ಯಾವುದೋ ಒಂದು ಪತ್ರಿಕೆಯಲ್ಲಿ ಬಂದಿರತಕ್ಕದ್ದು ಇರಬಹುದೆಂದು ನಾನು ಅಷ್ಟೇ ಈ ಸಂದರ್ಭದಲ್ಲಿ ಹೇಳಿ ಅದರ ಬಗ್ಗೆ ನಾನು ಈ ಸದನದ ಕಾಲವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ.

ಶ್ರೀಮಾನ್ ಕಾಶಪ್ಪನವರು ಈ ಸದನದ ಶಾಸಕರು. ಅವರ ಬಗ್ಗೆ ಏನು ರಕ್ಷಣೆ ಕೊಡಬೇಕೆಂದು ಹೇಳಿದಿರಿ ಅದನ್ನು ನಾನು ಒಪ್ಪುತ್ತೇನೆ. ಅಲ್ಲಿ ಏನು ನಡೆದಿದೆ ಎಂಬ ಎಲ್ಲ ವಿದ್ಯಮಾನಗಳ ಬಗ್ಗೆ ನಾನು ಈಗ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಒಂದು ಭರವಸೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಎರಡೂ ಕಡೆ ಏನೇನು ಘಟನೆ ಆಗಿದೆ, ಹೇಗೆ ಘಟನೆ ಆಗಿದೆ ಎಂಬುದನ್ನೆಲ್ಲ ವಿಶ್ಲೇಷಣೆ ಮಾಡುವುದಕ್ಕೆ ಬದಲಾಗಿ ಅವರಿಗೆ ಏನು ರಕ್ಷಣೆ ಕೊಡಬೇಕೆಂದು ತಾವು ಹೇಳಿದ್ದೀರಿ ಆ ರಕ್ಷಣೆ ಕೊಡುವುದಕ್ಕೆ ನಾನು ಸಿದ್ಧನಿದ್ದೇನೆ. ಅಲ್ಲಿ ಎರಡೂ ವರ್ಗದಲ್ಲಿ ಕೇಸ್ ರಿಜಿಸ್ಟರ್ ಆಗಿದೆ. ಎರಡೂ ಕಡೆ ಏನೇನು ಆಗಿದೆ ಎಂಬುದರ ಬಗ್ಗೆ ಈ ಸದನದಲ್ಲಿ ವಿಶ್ಲೇಷಣೆ ಮಾಡುವುದಕ್ಕೆ ಬದಲಾಗಿ ಮಾನ್ಯ ಕಾಶಪ್ಪನವರಿಗೆ ನಾನು ಈ ಸದನದಲ್ಲಿ ಆಶ್ವಾಸನೆ ಕೊಡುತ್ತೇನೆ. ಅವರಿಗೆ ಪ್ರತಿಯೊಂದು ಸನ್ನಿವೇಶದಲ್ಲೂ ಎಲ್ಲಾ ರೀತಿಯ ರಕ್ಷಣೆ ಕೊಡುವುದಕ್ಕೆ ಒಬ್ಬ ಪೋಲೀಸ್ ಅಧಿಕಾರಿಯನ್ನು ಅವರ ಜೊತೆ ಇಡುತ್ತೇನೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವಶ್ಯಕ ಬಿದ್ದು ತಮಗೆ ಈ ಸದನದ ರಕ್ಷಣೆಬೇಕೆಂದು ಕೇಳಿದರೆ, ಸೂಚನೆ ಕೊಟ್ಟರೆ ಒಬ್ಬ ಪೋಲೀಸ್ ಅಧಿಕಾರಿಯನ್ನು ಅವರ ಜೊತೆಯಲ್ಲಿ ಇಡುವುದಕ್ಕೆ ಇಷ್ಟಪಡುತ್ತೇನೆ. ನಾನು ಆ ಒಂದು ಆಶ್ವಾಸನೆ ಕೊಡುತ್ತೇನೆ. ಈ ಸದನದ ಯಾವುದೇ ಗೌರವಾನ್ವಿತ ಸದಸ್ಯರಿಗೆ ಅಪಾಯವಾಗುವುದಕ್ಕೆ ಅವಕಾಶ ಕೊಡುವುದಿಲ್ಲವೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದರೆ ಇಲ್ಲಿ ಎರಡೂ ಕಡೆ ಸಂಘರ್ಷವಾಗಿದೆ. ಎರಡೂ ಕಡೆ ಕೇಸ್ ರಿಜಿಸ್ಟರ್ ಮಾಡಿಕೊಂಡಿದ್ದಾರೆ. ಇದು ಇರತಕ್ಕ ವಾಸ್ತವಾಂಶ ಎಂದು ಹೇಳಿ ಅವರಿಗೆ ಈ ಸದನದಲ್ಲಿ ಅಷ್ಟೇ ಅಲ್ಲ ಹೊರಗಡೆ ಕೂಡ ಕೆಲಸ ಮಾಡುವುದಕ್ಕೆ ರಕ್ಷಣೆ ಕೊಡುತ್ತೇನೆ.

ಶ್ರೀ ಶಿವಶಂಕರಪ್ಪ ರಾಚಪ್ಪ ಕಾಶಪ್ಪನವರ : ಹಲವಾರು ಜನರು ನನ್ನ ಮೇಲೆ ಹಲ್ಲೆ ಮಾಡಿದ್ದಾರೆಯೇ ಹೊರತು ನಾವು ಯಾರ ಮೇಲೂ ಹಲ್ಲೆ ಮಾಡುವುದಕ್ಕೆ ಹೋಗಿಲ್ಲ. ನನ್ನ ಜೀಪಿನಲ್ಲಿ ನಾನು ಮತ್ತು ನನ್ನ ವಾಹನ ಚಾಲಕ ಹಾಗೂ ನಾಲ್ಕು ಜನ ಇದ್ದವರು ಹೊಡೆತ ತಾಳಲಾರದೆ ಪರಾರಿಯಾಗಿ ಓಡಹೋಗಿ ಎಲ್ಲೋ ಕೆಳಗಡೆ ಪೈಪ್‌ನಲ್ಲಿ ನುಗ್ಗಿಕೊಂಡು ಊರು ಮುಟ್ಟಿದ್ದಾರೆ. ಇಂಥ ಘಟನೆ ನಡೆದಿರುವಾಗ ಮತ್ತು ನಾನು ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿರುವಾಗ ನನ್ನ ಮೇಲೆ ಎರಡು ಕೇಸುಗಳನ್ನು ದಾಖಲು ಮಾಡಿದ್ದಾರೆ. ದೊಡ್ಡ ಫಿರ್ಯಾದಿ ಕೊಟ್ಟು ಜನತಾ ದಳದ ಕಾರ್ಯಕರ್ತರು ಕಛೇರಿ ಮುಂದೆ ಎರಡು ದಿನ ಮುಷ್ಕರ ಮಾಡಿದಾಗ, ನಾನು ಆಸ್ಪತ್ರೆಯಲ್ಲಿದ್ದಾಗ ಒಬ್ಬ ಎಸ್.ಪಿ. ಆಗಲಿ, ಡಿ.[illegible] ಆಗಲಿ ನನ್ನನ್ನು ಭೇಟಿ ಆಗುವುದಕ್ಕೆ ಬಂದಿಲ್ಲ, ಕೇಳುವುದಕ್ಕೆ ಬಂದಿಲ್ಲ, ಫೋನ್ ಮಾಡಿದರೂ ಕೂಡ ಫೋನಿಗೆ ಅಟೆಂಡ್ ಮಾಡುವುದಕ್ಕೆ

ತಯಾರಿಲ್ಲ. ಹಾಗೇ ಫೋನ್ ಬಂದ್ ಮಾಡಿದ್ದಾರೆ. ಅದೂ ಅಲ್ಲದೆ ನೂರಾರು ಜನರ ಮೇಲೆ ದೂರು ಕೊಟ್ಟರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ ಎಂಬ ಬೇಜವಾಬ್ದಾರಿಯುತವಾದ ಉತ್ತರ ಹೇಳಿದ್ದಾರೆ. ಇದರ ಬಗ್ಗೆ ಗೃಹ ಮಂತ್ರಿಯವರಿಗೆ ಆಗಿಂದಾಗ್ಗೆ ವಿಶೇಷವಾಗಿ ಫೋನ್‌ನಲ್ಲಿ ಮಾತನಾಡಿದ್ದೇನೆ. ಡಿಜಿಪಿ ಅವರಿಗೆ, ಡಿಐಜಿ ಅವರಿಗೆ ಹೇಳಿದ್ದೇನೆ. ಆದರೆ ಇದುವರೆಗೆ ಕ್ರಮ ಕೈಗೊಳ್ಳದೆ ನನ್ನ ಜೊತೆಯಲ್ಲಿ ಇರತಕ್ಕ ನಿರಪರಾಧಿಗಳನ್ನು ಇವತ್ತಿನ ದಿವಸ ಅರೆಸ್ಟ್ ಮಾಡಿ 4 ದಿನಗಳಿಂದ ಬಿಜಾಪುರ ಜೈಲಿನಲ್ಲಿ ಬಂಧಿಸಿದ್ದಾರೆ. ಕೇಸ್ ಕೊಟ್ಟ ಬಗ್ಗೆ ದಾಖಲೆಗಳನ್ನು ತಮ್ಮ ಎದುರಿಗೆ ಪ್ರೊಡ್ಯೂಸ್ ಮಾಡುತ್ತಿದ್ದೇನೆ. ಇದನ್ನು ತಾವು ದಯವಿಟ್ಟು ಗಮನಿಸಬೇಕು. (ದಾಖಲೆ ಪತ್ರಗಳನ್ನು ಮಾನ್ಯ ಅಧ್ಯಕ್ಷರಿಗೆ ಕಳುಹಿಸಿಕೊಟ್ಟರು). ದಿನಾಂಕ 13ರಂದು ನಾನು ಆಸ್ಪತ್ರೆಗೆ ಅಡ್ಮಿಟ್ ಆಗಿದ್ದೇನೆ. 14ರಂದು ಓವೈಸಿ ಆಸ್ಪತ್ರೆಯಲ್ಲಿ ದಾಖಲು ಮಾಡಿದ್ದಾರೆ. ಅಲ್ಲಿ ಎಕ್ಸ್‌ರೇ ತೆಗೆದು ರೆಕಾರ್ಡ್‌ಗಳು ಇವೆ. ಅವನ್ನು ನಾನು ಇವತ್ತಿನ ದಿವಸ ಸದನದಲ್ಲಿ ತಮಗೆ ತೋರಿಸುತ್ತಿದ್ದೇನೆ.

ಉಪಾಧ್ಯಕ್ಷರು : ಹೇಳಿರಿ ಖರ್ಗೆಯವರೆ, ಅವರು ಅಂಗಿ ಬಿಚ್ಚುತ್ತಿದ್ದಾರೆ. ಅಂಗಿ ಬಿಚ್ಚಬೇಡಿ ಎಂದು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಶಾಸಕರಿಗೆ ಹೊಡೆದಿದ್ದಾರೆಂದು ಹೇಳಿದರು; ಮತ್ತು ಆ ಬಗ್ಗೆ ಸೀರಿಯಸ್ ಆಗಿ ಗಮನ ಕೊಡಲಿಲ್ಲ.

(ಗೊಂದಲ)

ಅವರು ಆಸ್ಪತ್ರೆಯಲ್ಲಿದ್ದರು. ಆಗ ಕೌಂಟರ್ ಕೇಸ್ ಹಾಕಿ, ಅವರ ಮೇಲೆ ಕೇಸ್ ಹಾಕುವಾಗ ಏನು ಮಾಡಬೇಕು? ಇಂಥ ದೌರ್ಜನ್ಯ ನಡೆದಿರುವಾಗ ಮನವರಿಕೆ ಆಗಬೇಕಾದರೆ ಅಂಗಿ ಬಿಚ್ಚಿ ತೋರಿಸಬೇಕಾಗುತ್ತದೆ. ಅವರು ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾರೆ. ಇವರ ಮೇಲೆ ಕೌಂಟರ್ ಕೇಸ್ ಮಾಡಬೇಕಾದರೆ ನೀವು ಲೆಕ್ಕ ಹಾಕಿ, ಪೊಲೀಸ್‌ರು ಎಷ್ಟರಮಟ್ಟಿಗೆ ಹೋಗಿದ್ದಾರೆ......

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟಪಡಿಸಿದ್ದಾರೆ. ಆದರೆ ತಮ್ಮಲ್ಲಿ ಒಂದು ವಿನಂತಿ ಒಬ್ಬ ಶಾಸಕರಿಗೆ ಯಾವ ರೀತಿ ರಕ್ಷಣೆ ಬೇಕು ಎಂಬುದು ತಾವು ಅವರ ಉಡುಪುಗಳನ್ನು ಬಿಚ್ಚಬೇಡಿ ಅಂದಿರಿ. ಪೊಲೀಸ್ ಠಾಣೆಯಲ್ಲಿ ಅವರೇ ಬಿಚ್ಚುತ್ತಾರೆ.

ಉಪಾಧ್ಯಕ್ಷರು : ಆದರೆ ಇಲ್ಲಿ ಬಿಚ್ಚುವುದು ಬೇಡ ಎಂದು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ : ಆ ಅನುಭವ ತಮಗೆ ಆಗಿಲ್ಲ, ನಮಗೆ ಆಗಿದೆ. ಆದುದರಿಂದ ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುತ್ತೇನೆ. ಈ ಸದನದಲ್ಲಿ ಅವರೇ ನಿಮಗೆ ತಿಳಿಸಬೇಕಾಗುತ್ತದೆ. ಪರಿಸ್ಥಿತಿ ಶಾಸಕರಿಗೆ ಏನಾಗಿದೆ ಎಂದು ಹೇಳಬೇಕಾದರೆ ಎಲ್ಲೆಲ್ಲಿ ಏಟು ಹೊಡೆದಿದ್ದಾರೆಂಬುದನ್ನು ತೋರಿಸಬೇಕಾದರೆ ಇದೊಂದು ಮಾರ್ಗ. ಅವರು ತಮ್ಮ ಗಮನಕ್ಕೆ ತಂದಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ, ಶಾಸಕರಿಗೆ ಈ ರೀತಿ ಅನೇಕ ಕಡೆ ನಡೆದಿದೆ. ಇತ್ತೀಚೆಗೆ ಮಾಜಿ ಶಾಸಕರು ನಿಮ್ಮ ಮಾಲೂರಿನಲ್ಲಿ ನಾಗರಾಜ್ ಎಂಬುವರ ಮೇಲೆ ಆಗಿದೆ ಅದನ್ನೂ ಮೊನ್ನೆ ಒಂದು ಪತ್ರಿಕೆಯಲ್ಲಿ ಓದಿದೆ. ಅವರು ಕೊಲೆಯಿಂದ ತಪ್ಪಿಸಿಕೊಂಡು ಮುಂದೆ ಹೋದರು ಎಂದು ಬಂದಿದೆ. ಯಾರೋ ಕೊಲೆ ಮಾಡುವುದಕ್ಕೆ ಬಂದಿದ್ದರು ಎಂದು ಪತ್ರಿಕೆಯಲ್ಲಿ ಓದಿದೆ. ತಮ್ಮ ಮೂಲಕ ಹೇಳುತ್ತೇನೆ, ಇಂಥ ಪ್ರಸಂಗಗಳು ಅನೇಕ ಕಡೆ ನಡೆಯುತ್ತಿವೆ. ಅದನ್ನು ತಾವು ಪ್ರಾಮಾಣಿಕವಾಗಿ ಚಿಂತನೆ ಮಾಡಿ ಶಾಸಕರಿಗೆ ಈ ಪರಿಸ್ಥಿತಿ ಬಂದಾಗ ಮಾಡಬೇಕೆಂದು ನೋಡಬೇಕು.

ಚುನಾವಣಾ ಸಂದರ್ಭದಲ್ಲಿ ಅನೇಕ ಕಡೆ ಪೊಲೀಸರು ಬರಬೇಕು, ಇಂತಿಂಥ ಹಳ್ಳಿಗಳಿಗೆ ಬೇಕು ಎಂದರೆ ಪೋಲೀಸ್ ಅಧಿಕಾರಿಗಳು ಏನು ಹೇಳುತ್ತಾರೆಂದರೆ, ನಮ್ಮಲ್ಲಿ ಪೋಲೀಸ್ ಇಲ್ಲವೆಂದು ಹೇಳುತ್ತಾರೆ. ನಾವು ಏನು ಮಾಡಬೇಕು? ನಿಮ್ಮಲ್ಲಿ ನೂರು ಹಳ್ಳಿ ಇವೆ, ಹತ್ತು ಹಳ್ಳಿಗಳಲ್ಲಿ ಗಲಾಟೆ ಆದರೆ ಪೋಲೀಸ್ ಕಳುಹಿಸುವುದಕ್ಕೆ ಆಗುವುದಿಲ್ಲ ಅಂದರೆ ನಾವು ಏನು ಮಾಡಬೇಕು? ನಾವು ಬೇರೆ ಯಾರನ್ನಾದರೂ ತೆಗೆದುಕೊಂಡು ಹೋಗೋಣವೆ? ನಾನು ಇದನ್ನು ಬೇರೆ ಸಂದರ್ಭ ಬಂದಾಗ, ಭಾಷಣ ಮಾಡುವಾಗ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಸದಸ್ಯರು ಏನು ಅವರ ಮೇಲೆ ಹಲ್ಲೆ ಆಯಿತು ಎಂದು ಹೇಳಿದ್ದಾರೆ ಅದನ್ನು ನಾನು ನಿರಾಕರಣ ಮಾಡಲಿಲ್ಲ. ಎರಡೂ ಕಡೆ ಕೇಸ್ ರಿಜಿಸ್ಟರ್ ಆಗಿದೆ ಎಂದು ಹೇಳಿದ್ದೇನೆ. ಮಾನ್ಯ ಕಾಶಪ್ಪನವರು ಹೇಳತಕ್ಕದ್ದರಲ್ಲಿ, ಎರಡೂ ಕಡೆ ನೀವು ಹೇಳಿದಂತದ್ದು ಇದೆ. ನಿಮ್ಮ ಮೇಲೆ ಹಲ್ಲೆ ಮಾಡಿದಂಥದ್ದು ಇದೆ. ನಿಮ್ಮ ಗುಂಪಿನವರು ಇನ್ನೊಂದು ಗುಂಪಿನ ಮೇಲೆ ಹಲ್ಲೆ ಮಾಡಿದ್ದುದು ಇದೆ. ಒಂದು ವೇಳೆ ಅಲ್ಲಿರತಕ್ಕ ಪೋಲೀಸರಿಂದ ಸರಿಯಾಗಿ ವಿಚಾರಣೆ ಆಗುವುದಿಲ್ಲವೆಂದು ನಿಮ್ಮ ಮನಸ್ಸಿನಲ್ಲಿ ಇದ್ದರೆ ನಾನು ಈ ಸದನದಲ್ಲಿ ಸಿಓಡಿ.ಗೆ ರೆಫರ್ ಮಾಡುವುದಕ್ಕೆ ಸಿದ್ಧನಿದ್ದೇನೆಂದು ಒಪ್ಪಿಕೊಳ್ಳುತ್ತೇನೆ. ಅದಕ್ಕಿಂತ ಹೆಚ್ಚು ಹೇಳುವುದಕ್ಕೆ ಸಾಧ್ಯವಿಲ್ಲ. ಇಲ್ಲಿ ಮಾನ್ಯ ಕಾಶಪ್ಪನವರು ಒಂದು ತಿಳಿದುಕೊಳ್ಳಬೇಕು, ನಾವು ಯಾರನ್ನೋ ಇಲ್ಲಿ ರಕ್ಷಣೆ ಮಾಡಿ ಈ ಸ್ಥಾನದಲ್ಲಿ ಕುಳಿತುಕೊಳ್ಳಬೇಕಾದ ಅವಶ್ಯಕತೆ ಇಲ್ಲ. ನನಗಂತೂ ಇಲ್ಲ. ನಾನು ಇಷ್ಟು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿಮಗೆ ಸ್ಥಳೀಯ ಪೋಲೀಸ್‌ರು ವಿಚಾರಣೆ ಮಾಡತಕ್ಕದ್ದರಲ್ಲಿ ನಿಷ್ಪಕ್ಷಪಾತವಾದ ವಿಚಾರಣೆ ಇಲ್ಲವೆಂದರೆ ನಾನು ಈ ವಿಷಯವನ್ನು ಸಿಓಡಿ.ಗೆ ರೆಫರ್ ಮಾಡುವುದಕ್ಕೆ ಸಿದ್ಧನಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ದಯಮಾಡಿ ಸಿ.ಓ.ಡಿ.ಗೆ ರೆಫರ್ ಮಾಡಿ ಕಂಡೀಷನ್ ಬೇಡ. ಒಂದು ವೇಳೆ ಸರಿಯಾಗದಿದ್ದರೆ ಸಿ.ಓ.ಡಿ.ಗೆ ರೆಫರ್ ಮಾಡುತ್ತೇನೆ ಎಂಬುದು ಬೇಡ. ಈಗ ಕೇಸ್ ತಮಗೆ ಸ್ಪಷ್ಟವಾಗಿ ಹೇಳಿದ್ದಾರೆ. ಅವರ ಮೇಲೆಯೇ ಕೇಸ್ ಹಾಕಿದ್ದಾರೆ. ಅದ್ದರಿಂದ ಯಾವ ನ್ಯಾಯ ಸಿಗುತ್ತದೆ ಅಲ್ಲಿ?

ಶ್ರೀ ಎಚ್.ಡಿ. ದೇವೇಗೌಡ : ನಾನು ಏನು ಹೇಳಿದ್ದೇನೆಂದರೆ ಸ್ಥಳೀಯ ಪೋಲೀಸರಲ್ಲಿ ವಿಶ್ವಾಸ ಇಲ್ಲದೇ ಇದ್ದರೆ, if you want an enquiry to be held by an independent agency like the C.O.D, I am prepared to concede ಎಂದು ಹೇಳಿದ್ದೇನೆ.

ಶ್ರೀ ಎಸ್.ಆರ್. ಕಾಶಪ್ಪನವರ್ : ನನ್ನ ಮೇಲೆಯೇ ಕೇಸ್ ದಾಖಲೆ ಮಾಡಿದ್ದಾರೆ.

ಶ್ರೀ ಎಚ್.ಡಿ. ದೇವೇಗೌಡ : ನನಗೆ ಬಂದಿರುವ ರಿಪೋರ್ಟ್ ಬೇರೆ ಇದೆ. ಇದರ ಬಗ್ಗೆ ನಾನು ಯಾವ ಫಾರ್ಮಾಲಿಟೀಸ್ ಮೇಲೆ ನಿಂತುಕೊಳ್ಳುವುದಕ್ಕೆ ಸಿದ್ಧನಿಲ್ಲ. ಅವರು ಏನು ಆರೋಪ ಮಾಡಿದ್ದಾರೆ, ಎಸ್.ಪಿ. ನನ್ನನ್ನು ನೋಡಲಿಲ್ಲ, ಅವರು ನೋಡಲಿಲ್ಲ ಇದೆಲ್ಲಾ ಏನು ಹೇಳಿದ್ದಾರೆ, ಲೋಕಲ್ ಆಫೀಸರ್ಸ್ ಬಗ್ಗೆ ಇವರಿಗೆ ಕಾನ್ಫಿಡೆನ್ಸ್ ಇಲ್ಲದಿದ್ದರೆ I am prepared to refer it to C.O.D.

ಶ್ರೀ ಎಸ್.ಆರ್. ಕಾಶಪ್ಪನವರ್ : ಸದನ ಸಮಿತಿ ಮಾಡಿ. ನನ್ನ ಮೇಲೆ ಕೇಸ್ ದಾಖಲೆ ಮಾಡಿದ್ದಾರೆ.

ಶ್ರೀ ಎಚ್.ಡಿ. ದೇವೇಗೌಡ : ಅದು ಹೆಲ್ಪ್ ಆಗುವುದಿಲ್ಲ. ಅವನ್ನು ಹೇಳುವುದಕ್ಕಾಗುವುದಿಲ್ಲ. ನಿಮಗೆ ನಾಳೆ ಬೆಳಗ್ಗೆಯಿಂದಲೇ ಒಬ್ಬ ಪೋಲೀಸ್ ಕಾನ್ಸ್‌ಟೇಬಲ್ಲನ್ನು ನಿಮ್ಮ ಜೊತೆಯಲ್ಲಿ ಇಟ್ಟುಬಿಡುತ್ತೇನೆ. ಆಮೇಲೆ ನೀವೇ ಬೇಡ ಎಂದು ವಾಪಸ್ ಕಳುಹಿಸಬೇಕಾಗುತ್ತದೆ. ನನಗೆ ಗೊತ್ತಿದೆ ಅದರ ಹಣೆಬರಹ ಏನು ಎಂದು. ಬೇಕು ಎಂದರೆ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪೋಲೀಸ್ ಕಾನ್ಸ್‌ಟೇಬಲ್ ಕೊಡುವುದಕ್ಕಿಂತ ಎಲ್ಲರೂ ಮುಕ್ತವಾಗಿ ಓಡಾಡುವುದಕ್ಕೆ ಅವಕಾಶ ಇರುವಂತೆ ಮಾಡಿ. ಅವರೇನೋ ಶಾಸಕರು ಕೇಳಿದರು ಎಂದು ಕೊಟ್ಟಿರಿ. ಸಾವಿರಾರು ಜನರಿದ್ದಾರಲ್ಲ, ಅವರಿಗೆ ಬೇಕಲ್ಲ, ಮುಕ್ತವಾಗಿ ಜನರು ಓಡಾಡುವುದಕ್ಕೆ ತಮ್ಮ ಕಾಲದಲ್ಲಿ ವಾತಾವರಣ ನಿರ್ಮಾಣ ಮಾಡಿ.

ಶ್ರೀ ಎಚ್.ಡಿ. ದೇವೇಗೌಡ : ಒಪ್ಪಿಕೊಂಡೆ. ಆ ವಾತಾವರಣ ಮಾಡುವಾಗ ನಮ್ಮ ನಿಮ್ಮ ಎಲ್ಲರ ಸಹಕಾರ ಒಟ್ಟಿಗೆ ಇರಬೇಕಾಗುತ್ತದೆ ಈ ಸನ್ನಿವೇಶದಲ್ಲಿ ಶಾಸಕರಾಗಲೀ ಮಂತ್ರಿಗಳಾಗಲೀ ನಮ್ಮ ನಮ್ಮ ಕರ್ತವ್ಯ ಮಾಡುವಂಥ ಕಾಲದಲ್ಲಿ ನಾವು ನಮ್ಮ ಎಲ್ಲೆಕಟ್ಟಿನಲ್ಲಿ ಕೆಲಸ ಮಾಡಬೇಕಾಗುತ್ತದೆ. ನಿನ್ನೆ ನೀವು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದಿರಿ. ಶಾಸಕರೂ ಹೊರತಲ್ಲ, ಮಂತ್ರಿಗಳೂ ಹೊರತಲ್ಲ, ನಮ್ಮ ನಮ್ಮ ಚೌಕಟ್ಟಿನಲ್ಲಿ ನಾವು ಕೆಲಸ ಮಾಡಿದರೆ ಈ ಪ್ರಶ್ನೆ ಉದ್ಭವವಾಗುವುದಿಲ್ಲ. ಇಷ್ಟಕ್ಕೇ ನಿಲ್ಲಿಸುತ್ತೇನೆ ನಾನು.

ಶ್ರೀ ಎಸ್.ಆರ್. ಕಾಶಪ್ಪನವರ್ : ನನಗೆ ಉತ್ತರ ಬರಲಿಲ್ಲ. ನನ್ನ ಮೇಲೆ ಕಟ್ಟಲೆಗಳನ್ನು ಹಾಕಲಾಗಿದೆ. ಇದರ ಬಗ್ಗೆ ಮುಖ್ಯಮಂತ್ರಿಗಳು ಹೇಳಲಿಲ್ಲ. ಆಮೇಲೆ ಸದನ ಸಮಿತಿ ನೇಮಿಸಬೇಕು.

ಶ್ರೀ ಎಚ್.ಡಿ. ದೇವೇಗೌಡ : ಸದನ ಸಮಿತಿ ಇದಕ್ಕೆ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ನಾನು ಸಿ.ಓ.ಡಿ ವಿಚಾರಣೆ ಬೇಕಾದರೆ ಮಾಡಿಸುತ್ತೇನೆ ಎಂದು ಹೇಳಿದ್ದೇನೆ. ಅದಕ್ಕೆ ಈಗಲೂ ನಾನು ಬದ್ಧನಾಗಿದ್ದೇನೆ. ಸದನ ಸಮಿತಿಯನ್ನು ಪೋಲೀಸರ ಇನ್‌ವೆಸ್ಟಿಗೇಷನ್ ಬಗ್ಗೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ದಯಮಾಡಿ ಅದರ ಬಗ್ಗೆ ಒತ್ತಾಯ ಮಾಡುವಂಥದ್ದು ವಿಹಿತ ಅಲ್ಲ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ಈಗ ಬೆಂಗಳೂರಿನಲ್ಲಿ ಮತ್ತು ರಸ್ತೆ ದಕಾಯಿತಿ ಬಗ್ಗೆ ಎರಡರ ಬಗ್ಗೆ ಮಾತ್ರ ನಾನು ಸೂಕ್ಷ್ಮವಾಗಿ ತಿಳಿಸಿ ಹುಬ್ಬಳ್ಳಿ ಪ್ರಕರಣದ ಬಗ್ಗೆ ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ಬೆಂಗಳೂರಿನ ವಿಜಯನಗರದಲ್ಲಿ ಏನು ಒಂದು ಘಟನೆ ನಡೆಯಿತು ಆ ಸಂಬಂಧದಲ್ಲಿ ಸಾಕಷ್ಟು ಬಿಗಿಯಾದ ಕ್ರಮ ತೆಗೆದುಕೊಂಡಿದ್ದೇವೆ. ಸುಮಾರು 150ಕ್ಕಿಂತ ಹೆಚ್ಚು ರೌಡಿಗಳನ್ನು ಈಗ ಹೊರಗಡೆ ಬಿಟ್ಟಿಲ್ಲ ಆ ಘಟನೆ ಆದಮೇಲೆ ನಾವು ರಾಜಕೀಯವಾಗಿ ಕೆಲವು ನಿರ್ಣಯ ಮಾಡಬಾರದು ಎಂದು ಇದ್ದೆವು. ಏಕೆಂದರೆ ಇರುವ ವಿಷಯವನ್ನು ನೇರವಾಗಿ ಹೇಳಬೇಕಾದುತ್ತದೆ. ಅಧಿಕಾರಕ್ಕೆ ಬಂದತಕ್ಷಣ ಎಲ್ಲರನ್ನೂ ಗುರುತಿಸಿ ಒಳಗಡೆ ತೆಗೆದುಕೊಳ್ಳುವ ಕೆಲಸಕ್ಕೆ ಹೋಗಬಾರದು ಎಂದು ಇದ್ದೇವೆ.

ಕೆಲವರು ಒಂದೊಂದು ರಾಜಕೀಯ ಪಕ್ಷದ ಬೆಂಬಲ ಇರುವವರು ಇದ್ದಾರೆ. ಅದರ ಬಗ್ಗೆ ದೊಡ್ಡ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಹೇಗಿದೆ, ನಮ್ಮ ರಾಜ್ಯದಲ್ಲಿ ಕಳೆದ 20-25 ವರ್ಷಗಳಲ್ಲಿ ಹೇಗೆ ನಡೆದುಕೊಂಡು ಬಂದಿದೆ ಎಂಬುದು, ಕುಖ್ಯಾತ ರೌಡಿಗಳು ಹೊರಗಡೆ ಏನೇನಾಗಿದ್ದಾರೆ, ಕೆಲವು ತೀರಿಹೋಗಿದ್ದಾರೆ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನಾನು ಅಧಿಕಾರ ವಹಿಸಿಕೊಂಡ 15 ದಿವಸದಲ್ಲಿ ಎಂದು ಕಾಣುತ್ತದೆ, ಹಿರಿಯ ಪೋಲೀಸ್ ಅಧಿಕಾರಿಗಳ ಸಭೆಯಲ್ಲಿ

ಒಂದು ಮಾತನ್ನು ಹೇಳಿದ್ದೇನೆ. ಸಭೆಯಲ್ಲಿ ಮೂರು ಗಂಟೆ ಕುಳಿತಿದ್ದೇನೆ. ಅವರಿಗೇ ಒಂದೇ ಸೂಚನೆ ಕೊಟ್ಟೆ. ನೀವು ಯಾವುದೇ ಕಾರಣದಿಂದ ಎಂಥ ಸನ್ನಿವೇಶದಲ್ಲೂ ರಾಜಕೀಯ ಒತ್ತಡಕ್ಕೆ ನೀವು ಮಣಿಯಬೇಡಿ ಎಂದು ಹೇಳಿದ್ದೇನೆ. ನಿಮ್ಮ ಕರ್ತವ್ಯವನ್ನು ನೀವು ನಿರ್ವಹಣೆ ಮಾಡಿ ಎಂದು ಹೇಳಿದ್ದೇನೆ. ಬಹುಶಃ ನೀವು ಮುಖ್ಯಮಂತ್ರಿಗಳಾಗಿದ್ದಂಥವರು. ನಾನು ಅವತ್ತು ಆ ಸಭೆಯಲ್ಲಿ ಏನು ಹೇಳಿದೆ ಎಂಬುದು ಹೇಗಾದರೂ ನಿಮ್ಮ ಗಮನಕ್ಕೆ ಬಂದಿರುತ್ತದೆ. ಬಂದಿಲ್ಲ ಎಂದು ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಒಂದೇ ಶಬ್ದ ಹೇಳಿದೆ. ಇದರಲ್ಲಿ ರಾಜಕಾರಣ ಬೆರೆಸುವುದಕ್ಕೆ ಹೋಗಬೇಡಿ, ಇದರಿಂದ ಪೋಲೀಸ್ ಇಲಾಖೆಯ ಗೌರವ ಹಾಳಾಗುತ್ತದೆ ಎಂಬ ಮಾತನ್ನು ಸ್ಪಷ್ಟವಾಗಿ ಹೇಳಿದ್ದೇನೆ.

ಅದೇ ಕಾರಣದಿಂದ ನಾನು ಯಾವುದೇ ಅಧಿಕಾರಿಯನ್ನು ತೆಗೆಯುವುದಕ್ಕೆ ಹೋಗಲಿಲ್ಲ. ಈ ಮಾತನ್ನು ತಮಗೆ ಸ್ಪಷ್ಟೀಕರಣ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಈ ಒಂದು ಶಾಂತಿ ಕದಡುವುದಕ್ಕೆ ಅಷ್ಟೇ ಅಲ್ಲ, ಬೆಂಗಳೂರಿನಲ್ಲಿ ಏನು ಕೆಲವು ರಾಬರಿ ಇರಬಹುದು, ಡಕಾಯಿತಿ ಇರಬಹುದು ಅಥವಾ ಕೆಲವು ಕಳ್ಳತನ ಇರಬಹುದು, ಬೇರೆ ಬೇರೆ ಸಮಾಜಘಾತುಕ ಕೃತ್ಯಗಳನ್ನು ನಡೆಸುವುದು ಇರಬಹುದು ಇದರಲ್ಲಿ ಇವತ್ತು ನಾವು ಯಾವುದೇ ಮರ್ಜಿ ತೋರಿಸಬಾರದು. ಸುಮಾರು 150ಕ್ಕಿಂತ ಹೆಚ್ಚು ರೌಡಿಗಳನ್ನು ಸರ್ಕಾರ ದಸ್ತಗಿರಿ ಮಾಡಿ ವಿಚಾರಣೆ ಮಾಡುವ ಕೆಲಸ ಮಾಡಿದ್ದೇವೆ. ಆ ಘಟನೆ ಆದಮೇಲೆ ಮತ್ತೆ ಯಾವುದೇ ಘಟನೆ ಗಿಲ್ಲ. ಇಷ್ಟೇ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಸರ್ಕಾರ ಈ ವಿಷಯದಲ್ಲಿ ಮುಲಾಜಿಲ್ಲದೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧವಿದ್ದೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಹಿಂದೆ ಎಷ್ಟು ನಡೆಯಿತು, ಈಗ ಎಷಟು ನಡೆದಿದೆ ಎಂಬುದನ್ನು ಚರ್ಚೆ ಮಾಡುತ್ತಿಲ್ಲ. ನನ್ನ ಮುಂದೆ ಎಲ್ಲಾ ಇದೆ. ರಸ್ತೆ ಡಕಾಯಿತಿ ಬಗ್ಗೆ ಎಲ್ಲಾ ವರ್ಷದ್ದೂ ಇದೆ. ಸಾಮಾನ್ಯವಾಗಿ ನೀವು ಮುಖ್ಯಮಂತ್ರಿ ಆಗಿದ್ದಾಗಲೂ ವರದಿ ಕೊಡುತ್ತಾರೆ, ನಾನು ಮುಖ್ಯಮಂತ್ರಿಯಾಗಿರುವಾಗಲೂ ನನಗೂ ಆ ವರದಿಯನ್ನು ಕೊಡುತ್ತಾರೆ. ಯಾವ ಯಾವ ವರ್ಷ ಎಷ್ಟು ಡಕಾಯಿತಿಗಳಾಗಿವೆ ಅದನ್ನು ಹೇಳಿ ಸಮರ್ಥನೆ ಮಾಡಿಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಆದರೆ ಇಷ್ಟೇ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ರಾಜ್ಯದಲ್ಲಿ ಇವತ್ತು ಇಂಥ ಡಕಾಯಿತಿ ಪ್ರಕರಣಗಳನ್ನು ತಡೆಗಟ್ಟುವ ಬಗ್ಗೆ ಸರ್ಕಾರ ಕೆಲವು ಕಠಿಣವಾದ ನಿರ್ಣಯಗಳನ್ನು ಮಾಡಿದೆ. ಅವರು ಬರುತ್ತಾರೆ. ಒಂದು ಸಾರಿ ಎಲ್ಲೋ ಈ ತರಹ ಮಾಡುತ್ತಾರೆ, ಮತ್ತೆ ನೆರೆರಾಜ್ಯಗಳಿಗೆ ಓಡಿಹೋಗುತ್ತಾರೆ. ಅವರು ನೆರೆರಾಜ್ಯಗಳಾದ ಮಹಾರಾಷ್ಟ್ರದಿಂದ ಬರುತ್ತಾರೆ ಎಂಬ ವದಂತಿ ಇದೆ. ಆಂಧ್ರದಿಂದ ಬರುತ್ರೆ ಎಂಬ ಸುಳಿವು ಇದೆ. ಈ ತರಹ ಸನ್ನಿವೇಶಗಳು ಹಿಂದೆಯೂ ನಡೆದಿವೆ. ಆದ್ದರಿಂದ ಇವತ್ತು ಈ ವಿಷಯದಲ್ಲಿ ಸರ್ಕಾರ ತನ್ನ ಒಂದು ಜವಾಬ್ದಾರಿಯಿಂದ ನುಣುಚಿಕೊಳ್ಳದೆ ನಾವು ಕೆಲವು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ ಎಂದು ಹೇಳಿ ಅಂತ ರಾಜ್ಯ ಬಸ್ಸುಗಳಲ್ಲಿ ನಮ್ಮ ಇಬ್ಬರು ಸಿಬ್ಬಂದಿಗಳನ್ನು ಹಾಕಿ ಅವರಿಗೆ ಆರ್ಮ್ಡ್ ಪೋಲೀಸರ ರಕ್ಷಣೆ ಕೊಡುವುದು ಒಂದು ಮತ್ತೆ ಕಂಡಲ್ಲಿ ಗುಂಡಿಟ್ಟು ಕೊಲ್ಲುವುದು ಇದೆ. ಈ ರೀತಿಯ ನಾನಾ ಬಗೆಯ 8-10 ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಈ ಒಂದು ಡಕಾಯಿತಿ, ಅದರಲ್ಲೂ ಹಿಂದೆಂದೂ ಆಗದಂಥ ರೀತಿಯಲ್ಲಿ ಆಗಿದೆ. ಈ ರೀತಿ ಕೆಟ್ಟ ತರಹದ ಡಕಾಯಿತಿ ಹಿಂದೆಂದೂ ಆಗಿಲ್ಲ ಎಂದು ನನಗೆ ವರದಿ ಬಂದಿದೆ. ಅದಕ್ಕೋಸ್ಕರವೇ ಇರತಕ್ಕ ಎಲ್ಲಾ ಶಕ್ತಿಯನ್ನು, ರಾಜ್ಯದ ಹಿರಿಯ ಪೋಲೀಸ್ ಅಧಿಕಾರಿಗಳು ಮೇಲ್ಮಟ್ಟದಲ್ಲಿ ಚರ್ಚೆ ಮಾಡಿ, ಕೊಟ್ಟಂಥ ಎಲ್ಲಾ ಸಲಹೆಗಳನ್ನು ಒಪ್ಪಿ ಕಟ್ಟುನಿಟ್ಟಿನ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಸ್ವಾಮಿ, ಇಷ್ಟನ್ನು ಈ

ಸಂದರ್ಭದಲ್ಲಿ ಹೇಳಿ, ಯಾವ ಯಾವ ಕಾಲದಲ್ಲಿ ನೇನು ನಡೆದಿದೆ ಎಂದು ಹೇಳಿ ಸಭೆಯ ಕಾಲವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ.

ಆದನ್ನೆಲ್ಲಾ ಸಮರ್ಥನೆ ಮಾಡಿಕೊಳ್ಳುವುದಕ್ಕೆ ಅಂಕಿಅಂಶಗಳನ್ನು ಕೊಡುವುದಕ್ಕೆ ಹೋಗುವುದಿಲ್ಲ. ಒಂದು ಮಾತು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ರಾಜಕೀಯ ಬೆರೆಸುವ ಅವಶ್ಯಕತೆ ಇಲ್ಲ. ಎಲ್ಲ ಕಾಲದಲ್ಲೂ ನಡೆಯುತ್ತದೆ. ನಡೆದಿಲ್ಲ ಎಂದು ಹೇಳುವುದಿಲ್ಲ. ಆದರೆ ನಡೆದಿರುವುದನ್ನು ಸರಿಪಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದೇವೆಂಬ ಮಾತನ್ನು ಹೇಳಿ ಹಿಂದಿನ ಚುನಾವಣೆಯಲ್ಲಿ ಏನು ನಡೆಯಿತು, ಈ ಚುನಾವಣೆಯಲ್ಲಿ ಏನು ನಡೆದಿದೆ ಎಂಬ ಬಗ್ಗೆ ಅಂಕಿಅಂಶಗಳ ಆಧಾರದ ಮೇಲೆ ಸಮರ್ಥನೆ ಮಾಡಿಕೊಳ್ಳುವುದಕ್ಕೆ ನನಗೆ ಇಷ್ಟ ಇಲ್ಲ. ಇಷ್ಟು ಸೂಕ್ಷ್ಮವಾಗಿ ಹೇಳಿ, ಹುಬ್ಬಳ್ಳಿಯ ಘಟನೆ ಬಗ್ಗೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆ ಮಾಡಿದ್ದಾರೆ. ಸನ್ಮಾನ್ಯ ಖರ್ಗೆಯವರು ಚರ್ಚೆ ಮಾಡಿದ್ದಾರೆ. ಶ್ರೀಮಾನ್ ವೀರಪ್ಪ ಮೊಯಿಲಿಯವರು ಒಂದು ಹಂತದಲ್ಲಿ ತಮ್ಮ ಒಂದು ಅಭಿಪ್ರಾಯವನ್ನು ವ್ಯಕ್ತ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ವಾಟಾಳ್ ನಾಗರಾಜ್ ಅವರು ಶ್ರೀಮಾನ್ ನಂಜೇಗೌಡರು ಈ ವಿಷಯದಲ್ಲಿ ತಮ್ಮದೇ ಆದ ಅಭಿಪ್ರಾಯವನ್ನು ವ್ಯಕ್ತಪಡಿಸಿರತಕ್ಕ ಕಾಲದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಅದು ನಾವೆಲ್ಲರೂ ತಲೆ ತಗ್ಗಿಸತಕ್ಕ ಒಂದು ಘಟನೆ. ಇದರಲ್ಲಿ ಯಾರಿದ್ದಾರೆ ಯಾರಿಲ್ಲ ಎಂಬುದನ್ನು ಹೇಳುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಸ್ವಲ್ಪಮಟ್ಟಿಗೆ ನಮ್ಮ ನಮ್ಮ ಜವಾಬ್ದಾರಿಯನ್ನು ಅರಿತುಕೊಂಡು ಕೆಲಸ ಮಾಡುವುದಕ್ಕೆ ಸ್ಥಳೀಯವಾಗಿರತಕ್ಕ ಶಕ್ತಿಗಳು ಪ್ರಯತ್ನ ಮಾಡಿದರೆ ಒಳ್ಳೆಯದು ಎಂದು ಭಾವಿಸಿಕೊಳ್ಳುತ್ತೇನೆ. ಆದರೆ ತಾವು ಒಂದು ಮಾತನ್ನು ಹೇಳಿದಿರಿ. ಈದ್ಗಾ ಸಮಸ್ಯೆ ಬಗೆಹರಿದಮೇಲೆ ಒಳ್ಳೆಯ ವಾತಾವರಣ ಬಂತು ಎಂದು ಹೇಳಿದಿರಿ. ದಕ್ಕೆ ಸರ್ಕಾರ ಮಾತ್ರ ಕ್ರೆಡಿಟ್ ತೆಗೆದುಕೊಳ್ಳಬೇಕಾಗಿಲ್ಲ. ಇದಕ್ಕೆ ನೀವೆಲ್ಲಾ ಕಾರಣರಾಗಿದ್ದೀರಿ..

ನೀವೆಲ್ಲರೂ ಸಹಕಾರ ಕೊಟ್ಟಿದ್ದರಿಂದಲೇ ಅದರಲ್ಲೂ ವಿರೋಧಪಕ್ಷದ ನಾಯಕರಾಗಿಯಾಗಿ ಆ ಸಭೆಯಲ್ಲಿ ಎಲ್ಲರೂ ಇದ್ದು ಸಹಕಾರ ಕೊಟ್ಟಿದ್ದೀರ . ಅದರಲ್ಲಿ ಆ ಕಡೆ ಈ ಕಡೆ ಎಂದು ಯಾವುದೋ ಒಂದು ಕಡೆಯಿಂದ ಸಾಧನೆಯಾಯಿತು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಇಡೀ ಈ ಸನ್ನಿವೇಶ ಡಿಫ್ಯೂಸ್ ಮಾಡುವುದಕ್ಕೆ ರಾಜಕೀಯ ಮುಖಂಡರುಗಳು ಸಹಕಾರ ಕೊಟ್ಟರು. ಅಷ್ಟೇ ಅಲ್ಲ, ಸ್ಥಳೀಯವಾಗಿ ಎಲ್ಲಾ ವರ್ಗದ ಜನರೂ ಸಹಕಾರ ಕೊಟ್ಟರು. ಒಳ್ಳೆಯ ವಾತಾವರಣದಲ್ಲಿ ಸಮಸ್ಯೆ ಬಗೆಹರಿಯಿತು. ಆದರೆ ಇದನ್ನು ಕೆಡಿಸಬೇಕು ಎಂದು ಕೆಲವು ಸಂದರ್ಭದಲ್ಲಿ ಕೆಲವು ಶಕ್ತಿಗಳು ಪ್ರಯತ್ನ ಮಾಡಿದವು. ಇದರ ಬಗ್ಗೆ ನನಗೆ ಸಂಶಯ ಇದೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಅದರ ಬಗ್ಗೆ ನನ್ನ ಮನಸ್ಸಿನಲ್ಲಿ ಸಂಶಯ ಇದೆ. ಆದರೆ ಅದನ್ನು ನಿಖರವಾಗಿ ಹೀಗೇ ಎಂದು ಹೇಳುವುದಕ್ಕಾಗುವುದಿಲ್ಲ. ಗೃಹಮಂತ್ರಿಗಳು ಅಲ್ಲೇ ಇದ್ದಾರೆ. ಪೋಲೀಸ್ ಹಿರಿಯ ಅಧಿಕಾರಿಗಳೆಲ್ಲರೂ ಅಲ್ಲಿಯೇ ಇದ್ದಾರೆ. ಪರಿಸ್ಥಿತಿ ಹತೋಟಿಗೆ ಬಂದಿದೆಯೆಂದು ಇಷ್ಟು ಮಾತ್ರ ಹೇಳಬಲ್ಲೆ. ಟೆನ್ಷನ್ ಸಿಚುಯೇಷನ್ ಇರುವುದು ನಿಜ. ಅದಕ್ಕೋಸ್ಕರ ನೀವು ಬಿಟ್ಟು ಬರಕೂಡದು ಎಂದು ಹೇಳಿದ್ದೇನೆ. ಅಧಿಕಾರಿಗಳು ಸ್ಥಳದಲ್ಲೇ ಇರಬೇಕು ಅಷ್ಟೇ ಅಲ್ಲ, ಬೇರೆ ಬೇರೆ ಕಡೆಯಿಂದ ಸಫಿಷಿಯೆಂಟ್ ಫೋರ್ಸನ್ನು ನಾವು ಅಲ್ಲಿ ಈಗಾಗಲೇ ಅಳವಡಿಸಿದ್ದೇನೆ.

2.10 ಪಿ.ಎಂ

ಎಷ್ಟು ಸರ್ಕಾರ ಬಿಗಿ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದೆ ಆದರೆ ಒಂದು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಏನು ಎತ್ತಿದ್ದರು ಅದರೆ

ಯಾವ ಓಣಿಯಲ್ಲಿ ಹೋಗುತ್ತಿದ್ದರು, ಅಲ್ಲಿ ಒಂದೆ 25 ವರ್ಷಗಳಿಂದಲೂ ಅವಕಾಶ ಕೊಟ್ಟಿದ್ದಿಲ್ಲ ಅಂತ ಏನು ಹೇಳಿದರು, ಅದರ ಬಗ್ಗೆ ನಮ್ಮ ಅಧಿಕಾರಿಗಳನ್ನು ಕೇಳಿದಾಗ ಅವರಿಗೆ ಗೊತ್ತಿರುವ ಪ್ರಕಾರ ಈ ತರಹದ ಘಟನೆ ಎಂದೂ ನಡೆದಿಲ್ಲ. ಆದರೆ ಆ ಪ್ರದೇಶ ಏನು ಇದೆ ಅದು ಒಂದು ರೀತಿಯಲ್ಲಿ ತುಂಬ ಸೂಕ್ಷ್ಮವಾದ ಪ್ರದೇಶ. ಅಲ್ಲಿ 2 ಅಭಿಪ್ರಾಯ ಹೊಂದಿರತಕ್ಕ ಜನ ಇದ್ದಾರೆ. ಅಲ್ಲಿ ಸ್ವಲ್ಪ ಜನ ಸಂದಣಿ ಜಾಸ್ತಿ ಇದೆ. ಅದು ಹೇಗೆ ಆಗಿದೆ ಅಂದರೆ ಇದಕ್ಕೆ ನಾನಾ ಕಾರಣಗಳನ್ನು ಊಹೆ ಮೇಲೆ ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿಯವರೆಗೆ ಈ ಹೋಳಿ ಹಬ್ಬವನ್ನು ಮಾಡತಕ್ಕ ಕಾಲದಲ್ಲಿ ಅಂದರೆ ಕಾಮಣ್ಣನನ್ನು ಸುಡತಕ್ಕ ಒಂದು ಪದ್ಧತಿ ಇದೆಯಲ್ಲಾ, ಹಿಂದೆ ಸುಮಾರು 120 ಕಡೆ ಸುಟ್ಟಿದ್ದರೆ, ಈ ಸಾರಿ 300 ಕಡೆ ಸುಟ್ಟಿದ್ದಾರೆ. ಹಿಂದೆಂದೂ ಆಗಿದ್ದಲ್ಲ. ಅದು ನಿಜ. ಅದು ಅಷ್ಟೇ ಅಲ್ಲ. ಪ್ರೊಸೆಷನ್ ಹೋಗಿರುವುದು ಬೇರೆ ರಸ್ತೆಯಲ್ಲಿ. 12-30 ಗಂಟೆಗೆ ಮೆರವಣಿಗೆ ಎಲ್ಲ ಮುಗಿದು ಹೋಗಿದೆ. ವಾಪಸ್ಸು ಮನೆಗೆ ಹೋಗುವಾಗ ಒಂದು ಗುಂಪು ಅಂತ ನಾನು ಕರೆಯುತ್ತೇನೆ. ಯಾರು ಅಂತ ಹೇಳುವುದಕ್ಕೆ ಹೋಗುವುದಿಲ್ಲ. ಒಂದು ಗುಂಪಿನ ಜನ ಆ ಮಸೀದಿ ಇರತಕ್ಕ ಬೀದಿ ಮಾರ್ಗದಲ್ಲಿ ಬರುತ್ತಾರೆ. ಇದಕ್ಕೆ ಮುಲ್ಲಾ ಓಣಿ ಅಂತ ಏನೋ ಇಟ್ಟುಕೊಂಡಿದ್ದಾರೆ. ಅಲ್ಲಿ ಬರುತ್ತಾರೆ. ಬರುವಾಗ ತಮ್ಮ ಕೈಯಲ್ಲಿರತಕ್ಕ ಬಣ್ಣದ ಸಾಮಗ್ರಿಗಳನ್ನು ಎಸೆದುಕೊಂಡು ಹೋಗುತ್ತಿದ್ದಾರೆ. ಹೋಗುತ್ತಿರುವಾಗ ಒಬ್ಬ ಅಲ್ಲಿಯೇ ವಾಸ ಇರುತ್ತಾರೆ. ಯಾವ ಜಾತಿ ಅಂತ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಮತ್ತು ಅದನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಆತನ ಮೇಲೆ ಬಣ್ಣ ಬಿದ್ದಾಗ ಆತ ಕೂಗಿಕೊಳ್ಳುತ್ತಾನೆ. ಕೂಗಿಕೊಂಡಾಗ ಅಕ್ಕ ಪಕ್ಕದ ಮನೆಗಳಲ್ಲಿದ್ದಂತಹ 2 ಗುಂಪಿನ ಜನಗಳೂ ಬರುತ್ತಾರೆ. ಆದರೆ ಯಾರು ಮೃತನಾಗಿದ್ದಾನೆ, ಆತ ಅಲ್ಲಿ ಉಪಾಧ್ಯಾಯನಾಗಿದ್ದಾನೆ. ಆತ ಬೇರೆ ರಾಜ್ಯದಿಂದ ಬಂದು ಅಲ್ಲಿ ಸೇರಿಕೊಂಡಿದ್ದಾನೆ.

ಮಸೀದಿಯಲ್ಲಿದ್ದವರು ಎಲ್ಲರೂ ಹೊರಗೆ ಬರುತ್ತಾರೆ. ಅಲ್ಲಿ ಘರ್ಷಣೆಯಾಗುತ್ತದೆ. ಸ್ಥಳದಲ್ಲಿ ಹಾಗೇ ಒಬ್ಬ ತೀರಿಕೊಳ್ಳುತ್ತಾನೆ. ಆಮೇಲೆ ಅಲ್ಲಿ ಜನಸಂದಣಿ 4-5 ಸಾವಿರ ಜನ ಸೇರುತ್ತಾರೆ. ಅಲ್ಲಿಯ ಪೋಲೀಸ್‌ನ ಒಂದು ವ್ಯವಸ್ಥೆ ಏನು ಅಂದರೆ, ಈ ಘಟನೆಯಾಗುತ್ತದೆಂದು ಯಾರೂ ನಿರೀಕ್ಷಣೆ ಮಾಡಿರಲಿಲ್ಲ. ಕೇವಲ ಹತ್ತಾರು ಮಂದಿ ಪೋಲೀಸ್‌ನವರನ್ನು ಮಸೀದಿ ಮುಂದೆ ಇಟ್ಟಿರುತ್ತಾರೆ. ಏಕೆಂದರೆ ಆ ರೂಟ್‌ನಲ್ಲಿ ಹೋಗುವುದಕ್ಕೆ ಅನುಮತಿಯನ್ನು ಕೊಟ್ಟಿಲ್ಲ. ಬೇರೆ ರೂಟಿನಲ್ಲಿ ಹೋಗಿದ್ದಾರೆ. ಮೆರವಣಿಗೆ ಮುಗಿದ ಮೇಲೆ ಕಾಮನನ್ನು ಸುಟ್ಟ ಮೇಲೆ ಅವರು ಡಿಸ್‌ಪರ್ಸ್ ಆಗುವಾಗ 8-10 ಜನ ಮಸೀದಿ ಕಡೆಯಿಂದ ಬಂದರಲ್ಲ, ಆ ರಸ್ತೆಯಲ್ಲಿ ಆಗಿರುವ ಘಟನೆ ಇದು. ಆದರೆ ಇದು ಆ ರೀತಿಯಾಗುತ್ತದೆಂದು ಪೋಲೀಸ್‌ನವರು ಯಾರೂ ನಿರೀಕ್ಷಣೆ ಮಾಡಿರಲಿಲ್ಲ.

ಏಕೆಂದರೆ ಮೆರವಣಿಗೆ ಆ ರೂಟ್‌ನಲ್ಲಿ ಹೋಗಿಲ್ಲ. ವಾಪಸ್ಸು ಹೋಗುವ ಕಾಲದಲ್ಲಿ ಹಿಡಿ ಮಂದಿ ಜನ ಬಂದು ತಮ್ಮ ಕೈಯಲ್ಲಿದ್ದ ಬಣ್ಣದ ಸಾಮಗ್ರಿಗಳನ್ನು ಬೇರೆಯವರ ಮೇಲೆ ಬೀಳತಕ್ಕ ರೀತಿಯಲ್ಲಿ ಎಸೆದಾಗ ಅಲ್ಲಿ ಸ್ವಲ್ಪ ಮಟ್ಟಿಗೆ ಯಾರು ಇದ್ದಾರೆ ಅವರ ಮನಸ್ಸಿಗೆ ನೋವಾಗಿರತಕ್ಕ ವರ್ಗ ಅಂತ ಕರೆಯುತ್ತೇನೆ. ಏಕೆಂದರೆ ಮತ್ತೊಂದು ಪ್ರಚೋದನೆ ಮಾಡುವುದಕ್ಕೆ ಎಡೆಕೊಡಬಾರದು ಅಂತ ಸ್ವಲ್ಪ ಮಟ್ಟಿಗೆ ಹಿಡಿದು ಈ ವಿಷಯವನ್ನು ಹೇಳುತ್ತಿದ್ದೇನೆ. ಏಕೆಂದರೆ ಕೆಲವರು ಮಸೀದಿಯಲ್ಲಿ ಒಬ್ಬರು ಟೀಚರ್ ಅಂತ ಹೇಳಿದರು, ಅವರು ತೀರಿಕೊಂಡಿದ್ದಾರೆ. ಅವರ ಹೆಸರನ್ನು ಹೇಳುತ್ತೇನೆ. ಅದರಿಂದ ಏನೂ ಆಗುವುದಿಲ್ಲ, ಆತನ ಹೆಸರು ಅಖೀಲ್ ಅಯನುಲ್ಲ ಅಂತ. ಅವರು ಬೇರೆ ರಾಜ್ಯದಿಂದ ಬಂದು ಇಲ್ಲಿ ಇದ್ದಾರೆ. ಪಾಠ ಹೇಳಿಕೊಡತಕ್ಕ

ಒಬ್ಬ ಟೀಚರ್. ಆತ ಹೊರಗಡೆ ಬಂದ ಮೇಲೆ 8-10 ಜನ ಸೇರಿಕೊಂಡು ಅವರನ್ನು ಅಲ್ಲೇ ತಿಳಿಸಿದ್ದಾರೆ. ಸ್ಥಳದಲ್ಲೇ ತೀರಿಕೊಂಡಿದ್ದಾನೆ. ಇದು ಆದ ಮೇಲೆ 4-6 ಸಾವಿರ ಜನ ಸೇರಿಕೊಳ್ಳುತ್ತಾರೆ. ಪೋಲೀಸ್‌ನವರು ಬರುತ್ತಾರೆ. ತಾವು ನನಗೆ ಬಂದಿರುವ ವರದಿ ಗುಂಡು ಹಾರಿಸತಕ್ಕ ಬಗ್ಗೆ ಕಾನೂನಿನಲ್ಲಿ ಏನೇನು ರೆಕಾರ್ಡ್ ಮಾಡಿಕೊಳ್ಳಬೇಕು ಅಂತ ಮಾಡಿದ್ದಾರೆ ಅಂತ ಏನು ಹೇಳಿದಿರಿ, ನನಗೆ ಬಂದಿರುವ ವರದಿಯೂ ಅದೇ ರೀತಿ ಇದೆ. ಆದರೆ ಅದು ಸರಿ ಇದೆಯೋ? ಸರಿ ಇಲ್ಲವೋ ಅದರ ಬಗ್ಗೆಯೂ ವಿಚಾರಣೆ ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ. ಮುಂದೆ ಹೇಳುತ್ತೇನೆ, ಏನು ಮಾಡಬೇಕು ಎನ್ನುವುದರ ಬಗ್ಗೆ ನಿಮ್ಮ ಅಭಿಪ್ರಾಯವನ್ನೂ ತೆಗೆದುಕೊಳ್ಳುತ್ತೇನೆ. ಆದರೆ ಇದು ಅತ್ಯಂತ ದುರ್ದೈವದ ಘಟನೆ ಎಂದು ಹೇಳುತ್ತೇನೆ. ಬಹಳ ಒಳ್ಳೆಯ ವಾತಾವರಣ ಬಂದಿದೆ, ರಾಜ್ಯಕ್ಕೆ ಒಳ್ಳೆಯ ಹೆಸರು ಬಂದಿದೆ. ನಾನು ಇದನ್ನು ಹತ್ತಾರು ಕಡೆ ಹೇಳಿದ್ದೇನೆ. ಎಲ್ಲರೂ ಸಹಕರಿಸಿದ್ದಾರೆ, ಅದರ ಬಗ್ಗೆ ವೈಶಿಷ್ಟ ಇಲ್ಲ ಎನ್ನುವ ಮಾತನ್ನು ಹತ್ತಾರು ಕಡೆ ಹೇಳಿದ್ದೇನೆ. ಇದು ದುರ್ದೈವದ ಸಂಗತಿ ಎಂದು ಹೇಳುತ್ತೇನೆ. ಇದು ರಾಜ್ಯಕ್ಕೆ ಕಳಂಕ ತರತಕ್ಕ ಘಟನೆ. ನಾವೆಲ್ಲರೂ ತಲೆ ತಗ್ಗಿಸತಕ್ಕಂತಹದ್ದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದಕ್ಕೆ ನಾವು ಹಿಂದೆ ಮುಂದೆ ನೋಡುವುದಿಲ್ಲ. ಯಾವುದೇ ಕಾರಣದಿಂದ ಈ ಸದನಕ್ಕೆ ಆಶ್ವಾಸನೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಇಂತಹ ಶಕ್ತಿಗಳನ್ನು ದಮನ ಮಾಡುವುದಕ್ಕೆ ಹಿಂದೆ ಮುಂದೆ ನೋಡುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅವರು ಯಾವ ವರ್ಗದವರು, ಇದಕ್ಕೆ ಏನು ಕಾರಣ ಎಂದು ಇಲ್ಲಿ ಚರ್ಚೆ ಮಾಡುವುದಕ್ಕೆ ಬದಲಾಗಿ ಸರ್ಕಾರ ಮತ್ತಷ್ಟು ಬಿಗಿಯಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತದೆ ಇದಕ್ಕೆ ನಿಮ್ಮ ಸಹಕಾರವನ್ನು ಕೇಳುತ್ತೇನೆಂದು ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳುತ್ತೇನೆ. ಕೆಲವು ಅಧಿಕಾರಿಗಳು ಬ್ಯಾಕ್‌ಷಿಪ್ ಅಂತ ಕರೆದರೆ ತಪ್ಪಾಗುವುದಿಲ್ಲ. ನನ್ನ ಮನಸ್ಸಿಗೆ ನೊಂದು ಈ ಶಬ್ದವನ್ನು ಪ್ರಯೋಗ ಮಾಡುತ್ತಿದ್ದೇನೆ. ಆ ಒಂದು ಕಾರಣದಿಂದ ಅಧಿಕಾರಿಗಳನ್ನು ಬದಲಾವಣೆ ಮಾಡಬಾರದು ಎಂದು ನಿರ್ಣಯ ಮಾಡಿದೆ. ಕಾರಣ ಇಷ್ಟೆ, ಅಕಡೆಮಿಕ್ ಇಯರ್ ಇರುತ್ತದೆ. ಇದು ಸರಿಯಲ್ಲ, ವರ್ಗ ಮಾಡಬಾರದು. ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಮತ್ತೊಂದಕ್ಕೆ ತೊಂದರೆಯಾಗುವುದು ಬೇಡ. ಜನರಲ್ ಟ್ರಾನ್ಸ್‌ಫಾರ್‌ನಲ್ಲಿ ನೋಡೋಣ ಅಂತ ನೀವು ಯಾವ ಅಧಿಕಾರಿಗಳನ್ನು ಇಟ್ಟಿದ್ದಿರೋ ಅದೇ ಅಧಿಕಾರಿಗಳನ್ನು ಮುಂದುವರಿಸಿದ್ದೇವೆ. 3-4 ಜನ ಪೋಲೀಸ್ ಇಲಾಖೆಯಲ್ಲಿ ಬಿಟ್ಟರೆ ಬೇರೆ ಯಾರನ್ನೂ ಸಬ್‌ಇನ್ಸ್‌ಪೆಕ್ಟರ್‌ನ್ನು ವರ್ಗ ಮಾಡಿಲ್ಲ. 7-8 ಜನ ಇರಬಹುದು, ಒ.ಒ.ಡಿ ಮೇಲೆ ಹಾಕಿರು

ವವರನ್ನೂ ಸೇರಿಸಿ ನಿಮ್ಮ ಕ್ಷೇತ್ರದ ಘಟನೆಯನ್ನು ಏನು ವಿವರಿಸಿದಿರಿ, 3-4-5 ಜನ ಇರಬಹುದು ಇಡೀ ರಾಜ್ಯದಲ್ಲಿ. ವರ್ಗ ಮಾಡಬಾರದು ಅಂತ ನಿರ್ಣಯ ತೆಗೆದುಕೊಂಡ. ಒತ್ತಡ ಸಾಕಷ್ಟು ನಮಗೂ ಬಂದಿದೆ. ನೀವು ಇಟ್ಟಿರತಕ್ಕ ಅಧಿಕಾರಿಗಳು ಅಸಮರ್ಥರು ಎಂದು ವಾದ ಮಾಡುವುದಕ್ಕೆ ತಯಾರಿಲ್ಲ. ಅಲ್ಲಿ ಇರತಕ್ಕ ಅಧಿಕಾರಿಗಳು ಯಾರಿಂದಲೇ ಅವರಿಂದಲೇ ಕೆಲಸ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಈಗಾಗಲೇ ಮೊದಲು ಹೇಳಿದೆನಲ್ಲ ಬ್ಲ್ಯಾಕ್‌ಶಿಪ್ ಅಂತ. ಅವರ ಕರ್ತವ್ಯ ಲೋಪ ಇದ್ದರೆ ಅವರ ಬಗ್ಗೆ ಸರ್ಕಾರ ತೀವ್ರವಾಗಿ ಗಮನ ಹರಿಸುತ್ತದೆ. ಯಾವುದೇ ಶಿಕ್ಷೆಯನ್ನು ಕೊಡುವುದಕ್ಕೆ ಸರ್ಕಾರ ಹಿಂದೆ ಮುಂದೆ ನೋಡುವುದಿಲ್ಲ ಎನ್ನುವ ಮಾತನ್ನು ಈ ಸದನಕ್ಕೆ ಆಶ್ವಾಸನೆ ಕೊಡುವುದಕ್ಕೆ ತಯಾರಿದ್ದೇನೆ. ವಿರೋಧಪಕ್ಷದ ನಾಯಕರಾದ ಶ್ರೀಮಾನ್‌ಯ ಯಡಿಯೂರಪ್ಪನವರು ಒಬ್ಬ ಅಧಿಕಾರಿಯ ಹೆಸರು ತೆಗೆದು ಹೇಳಿದರು. ಆದರೆ ನಾನು ಆ ರೀತಿ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಕಾರಣ ಇಷ್ಟೆ.

ಡಿ.ಜಿ.ಪಿ.ಯವರು ಅಲ್ಲೇ ಇದ್ದಾರೆ. ಹೋಮ್ ಮಿನಿಸ್ಟರ್ ಕೂಡ ಅಲ್ಲೇ ಇದ್ದಾರೆ. ಅವರಿಗೆ ಸೂಕ್ಷ್ಮವಾಗಿ ಪ್ರತಿಯೊಂದು ವಿಷಯವನ್ನು, ಮಾಹಿತಿಯನ್ನು ಸಂಗ್ರಹಣೆ ಮಾಡಿಕೊಂಡು ಬರಬೇಕು ಅಂತ ಹೇಳಿದ್ದೇನೆ. ಏನು ಕಾರಣ, ಅಧಿಕಾರಿಯ ಕರ್ತವ್ಯ ಲೋಪ ಆಗಿದೆಯೆ? ಏನು ಅಂತ ತಿಳಿದುಕೊಳ್ಳಿ ಎಂದು ಹೇಳಿದ್ದೇನೆ. ಹಾಗೆಯೇ ಈ ಘಟನೆಯಾಗುವುದಕ್ಕೆ ಯಾರು ಕಾರಣರು ಇದ್ದಾರೆ, ಅದರ ಬಗ್ಗೆ ನನಗೆ ವರದಿ ಕೊಡಬೇಕು ಅಂತ ಹೇಳಿದ್ದೇನೆ. ಅವರು ಬಂದ ಮೇಲೆ ಯಾವ ಅಧಿಕಾರಿಯಿಂದ ಕರ್ತವ್ಯ ಲೋಪ ಆಗಿದ್ದರೆ, ಡಿ.ಜಿ.ಪಿ.ಗಿಂತ ಬೇರೆ ಅಧಿಕಾರಿ ಇದ್ದಾರೆಯೇ ಅವರು ಏನು ವರದಿಯನ್ನು ಕೊಡುತ್ತಾರೆ ಅದರ ಆಧಾರದ ಮೇಲೆ ಸರ್ಕಾರ ......

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಷ್ಪಕ್ಷಪಾತವಾದ ತನಿಖೆಯಾದರೆ ನಿಜಾಂಶ ಹೊರಗೆ ಬರುತ್ತದೆ....

ಶ್ರೀ ಹೆಚ್.ಡಿ. ದೇವೇಗೌಡ : ಅದನ್ನು ಹಿಡಿದುಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಯಾವ ಪಾರ್ಟಿಯನ್ನು ಹೆಸರನ್ನು ತೆಗೆದು ಮಾತನಾಡುವುದಕ್ಕೆ ಹೋಗುವುದಿಲ್ಲ. ಎಲ್ಲರೂ ಕೆಟ್ಟವರು ಇದ್ದಾರೆ ಅಂತ ವಾದ ಮಾಡುವುದಿಲ್ಲ. ಒಳ್ಳೆಯವರೂ ಇದ್ದಾರೆ. ಕೆಟ್ಟವರೂ ಇದ್ದಾರೆ. ಇಂತಹ ಸನ್ನಿವೇಶವನ್ನು ಉಲ್ಬಣಾವಸ್ಥೆಗೆ ತೆಗೆದುಕೊಂಡು ಹೋಗತಕ್ಕಂತಹ ಶಕ್ತಿಗಳೂ ಇವೆ. ಅವುಗಳು ಯಾವುವು? ಎಂಬುದನ್ನು ನಾವು ನೋಡಿದ್ದೇವೆ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದು ಬೇಡ. ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಎಡಿಯೂರಪ್ಪನವರು ಜ್ಯುಡಿಷಿಯಲ್ ಎನ್‌ಕ್ವೈರಿ ಆಗಬೇಕು ಎಂದು ಹೇಳಿದರು. ಅದನ್ನು ಮಾಡುವುದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ಅವರಿಗೆ ಏನು ಟರ್ಮ್ಸ್ ಆಫ್ ರೆಫರೆನ್ಸ್ ಅಂತ ಹೇಳಿದರೆ, ಯಾರು ಕಾರಣಕರ್ತರು ಇದ್ದಾರೆ? ಇದರ ಹಿಂದೆ ಯಾರು ಇದ್ದಾರೆ? ಅದನ್ನು ಹೊರಗಡೆ ತರಬೇಕು ಎಂದು ಅದರ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ನಾವು ಹಾಕುತ್ತೇವೆ. ಅಧಿಕಾರಿಗಳ ಕರ್ತವ್ಯ ಲೋಪವಾಗಿದ್ದರೆ ಅವರಿಗೆ ಸರಿಯಾದ ಶಿಕ್ಷೆಯನ್ನು ಕೊಡುವುದಕ್ಕೆ ಸರ್ಕಾರ ಹಿಂದೆ ಮುಂದೆ ನೋಡುವುದಿಲ್ಲ ಅಂತ ಹೇಳುತ್ತೇನೆ. ಅಲ್ಲಿಂದ ಮುಂದಕ್ಕೆ ನಾನು ಅಧಿಕಾರವನ್ನು ವಹಿಸಿಕೊಂಡ ಮೇಲೆ ಪ್ರತಿಯೊಂದು ಸೆನ್ಸಿಟಿವ್ ಏರಿಯಾದಲ್ಲಿ ಎಲ್ಲಾ ಸನ್ನಿವೇಶದಲ್ಲೂ ಅಲರ್ಟ್ ಆಗಿರಬೇಕು ಎನ್ನುವ ಮಾತನ್ನು ಹೇಳಿದ್ದೇನೆ. ಯಾವ ರೀತಿ ಆಗುತ್ತದೆಂಬುದು ನಿಮಗೂ ಗೊತ್ತಿದೆ ನಮಗೂ ಗೊತ್ತಿದೆ. ಏಕೆಂದರೆ ಆಡಳಿತ ನಡೆಸಿರುವುದು ನಾವೂ - ನೀವು. ರಾಜ್ಯದ ಕೆಲವು ಪ್ರದೇಶಗಳು ಸೆನ್ಸಿಟಿವ್ ಇವೆ. ಆ ಹಿನ್ನೆಲೆಯಲ್ಲಿ ಪ್ರತಿಯೊಂದು ಸನ್ನಿವೇಶದಲ್ಲೂ ಮುನ್ನೆಚ್ಚರಿಕೆ ವಹಿಸಬೇಕು ಎನ್ನುವ ಮಾತನ್ನು ನಾನು ಅಧಿಕಾರಿಗಳಿಗೆ ಖಂಡ ತುಂಡವಾಗಿ ಹೇಳಿದ್ದೇನೆ. ಆದರೆ ನಿನ್ನೆ ನಡೆದಿರತಕ್ಕ ಒಂದು ಸನ್ನಿವೇಶದಲ್ಲಿ ಅಧಿಕಾರಿಯಗಳ ಕರ್ತವ್ಯ ಲೋಪವಾಗಿದ್ದರೆ ಅವರು ಎಷ್ಟೇ ಎತ್ತರದ ಅಧಿಕಾರಿಗಳಿದ್ದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದೆ ಮುಂದೆ ನೋಡುವುದಿಲ್ಲ. ಆದರೆ ಒಂದೇ ಒಂದು ಪೋಲೀಸ್ ನಿರ್ದೇಶಕರು ಒಂದು ವರದಿಯನ್ನು ನನಗೆ ಕೊಡುವವರೆಗೂ ನಾನು ಈ ಸಂದರ್ಭದಲ್ಲಿ ದುಡುಕಿ ಈ ಸದನದಲ್ಲಿ ಮಾತನಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಮುಂದೆ ಈ ರೀತಿಯ ಸನ್ನಿವೇಶ ನಡೆಯದ ರೀತಿಯಲ್ಲಿ ಮತ್ತಷ್ಟು ಬಿಗಿಯಾದ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ. ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುವುದಕ್ಕೆ ಹಿಂದೆ ಮುಂದೆ ನೋಡುವುದಿಲ್ಲ ಎನ್ನುವ ಮಾತನ್ನು ಹೇಳುತ್ತಾ, ದಯಮಾಡಿ ಇಷ್ಟು ಹೇಳಿದ ಮೇಲೂ ಮಾನ್ಯ ಹಿರಿಯ ಸದಸ್ಯರಾದ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಅಡ್ಜರ್ನ್‌ಮೆಂಟ್ ಮೋಷನ್‌ಗೆ ಪ್ರೆಸ್ ಮಾಡುವುದಿಲ್ಲ ಅಂತ ನಾನು ಭಾವಿಸುತ್ತೇನೆ. ಇಷ್ಟನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಿದ್ದಾರೆ ನಾನು ಕ್ಲಾರಿಫಿಕೇಷನ್ ಕೇಳಬೇಕು. ಮಾನ್ಯ ಮುಖ್ಯಮಂತ್ರಿಗಳು

ಕೆಲವು ವಿಷಯಗಳನ್ನು ಸೀರಿಯಸ್ಸಾಗಿ ತೆಗೆದುಕೊಂಡಿದ್ದಾರೆ. ಕೆಲವು ವಿಷಯಗಳನ್ನು ಬಹಳ ಲಘುವಾಗಿ ತೆಗೆದುಕೊಂಡಿದ್ದಾರೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ....

ಉಪಾಧ್ಯಕ್ಷರು : ಜುಡಿಷಿಯಲ್ ಎನ್‌ಕ್ವಾಯರಿ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ ನೀವು ಏಕೆ ಹೇಳುತ್ತಿದ್ದೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಜುಡಿಷಿಯಲ್ ಎನ್‌ಕ್ವಾಯರಿಗೆ ಹುಬ್ಬಳ್ಳಿಯ ಒಂದು ವಿಷಯದಲ್ಲಿ ಮಾತ್ರ ಹೇಳಿದ್ದಾರೆ. ಬೇರೆ ವಿಷಯದಲ್ಲಿ ಅಲ್ಲ. ಎಲ್ಲವನ್ನು ಜುಡಿಸಿಯಲ್ ಪ್ರೊಬ್ ಮಾಡುವುದಾದರೆ ನಮ್ಮ ಅಭ್ಯಂತರವಿಲ್ಲ. ರಾಜು ಆಚಾರಿಯ ಬಗ್ಗೆ ಅವರು ಏನು ಹೇಳಿದರು? ಅನಿಲಕುಮಾರ್ ಮತ್ತು ಅನೇಕ ಯೂತ್ ಕಾಂಗ್ರೆಸ್ ವಿದ್ಯಾರ್ಥಿಗಳು ಏನು ಅಜಿಟೇಷನ್ ಮಾಡಿದ್ದರು ಇದಕ್ಕೆ ಅದಕ್ಕೆ ಏನೂ ಸಂಬಂಧವಿಲ್ಲವೆಂದು ಹೇಳುತ್ತೇನೆ. ಅವರು ಅಜಿಟೇಷನ್ ಮಾಡಿದ್ದುದು ರಾಜು ಆಚಾರಿಯ ಮಾರ್ಡರ್ ಯಾರು ಮಾಡಿದ್ದಾರೆ. ಅವರನ್ನು ಕಂಡುಹಿಡಿದು ಕ್ರಮ ತೆಗೆದುಕೊಳ್ಳಿಯೆಂದು. ನೀವು ಸಿಓಡಿ ಎನ್‌ಕ್ವಾಯರಿ ಮಾಡಿಸಿ ಎಂದು ಹೇಳಿ ಅವರು ಸಿಓಡಿ ಎನ್‌ಕ್ವಾಯರಿಗೆ ಪ್ರೆಸ್ ಮಾಡಿದ್ದಾರೆ. ತಾವು ಒಪ್ಪಿಕೊಳ್ಳುತ್ತಾ ಇದ್ದೀರಿ. ಲೋಕಲ್ ಪೋಲೀಸ್‌ರ ಮೇಲೆ ವಿಶ್ವಾಸವಿಲ್ಲ. ಹುಬ್ಬಳ್ಳಿ ಕಮರಿಪೇಟೆಯಲ್ಲಿ ನಡೆದ ಗಲಭೆಯ ಬಗ್ಗೆ ಜುಡಿಷಿಯಲ್ ಪ್ರೋಬ್ ಮಾಡುವುದಕ್ಕೆ ಇವತ್ತು ತಾವು ಒಪ್ಪಿ ಸಿದ್ಧರಾಗಿದ್ದೀರಿ. ಹಿಂದೆ ಮಾರ್ಡರ್ ಆಗಿದ್ದುದು ಬೆಳಕಿಗೆ ಬರಲಿ, ಅದು ಬೆಳಕಿಗೆ ಬರುವುದಿಲ್ಲ, ಯಾರು ನಿಜವಾದ ಅಕ್ಯೂಸ್ಡ್ ಎಂದು ಗೊತ್ತಾಗಬೇಕು ಅದನ್ನು ಸಿಓಡಿ ಎನ್‌ಕ್ವಾಯರಿ ಮಾಡಿಸಿ ಅಜಿಟೇಷನ್ ಮಾಡುತ್ತಿದ್ದ ವಿದ್ಯಾರ್ಥಿಗಳನ್ನು ಅಸಿಸ್ಟೆಂಟ್ ಕಮೀಷನರ್ ಒಯ್ದು ಐದು ದಿವಸ ಪೋಲೀಸ್ ಕಸ್ಟಡಿಯಲ್ಲಿಟ್ಟುಕೊಂಡು ಸೆಷನ್ ಕೋರ್ಟ್ ಜಡ್ಜ್ ಮುಂದೆ ಪ್ರೊಡ್ಯೂಸ್ ಮಾಡಿದಾಗ ಸೆಷನ್‌ಕೋರ್ಟ್ ಜಡ್ಜ್‌ರವರು ಏನು ಹೇಳಿದರು ಅಂದರೆ, ಇದು ಇಲ್‌ಲೀಗಲ್ ಡಿಟೆನಷನ್ ಇದೆಯೆಂದು ಜಡ್ಜ್‌ಮೆಂಟ್ ಕೊಟ್ಟರು. ಅದರ ಬಗ್ಗೆ ಮುಖ್ಯಮಂತ್ರಿಗಳು ಏನೂ ಹೇಳಲಿಲ್ಲ. ಅದಕ್ಕೆ ಇದಕ್ಕೆ ಸಂಬಂಧವಿಲ್ಲ. ವಿದ್ಯಾರ್ಥಿಗಳು ಅಜಿಟೇಷನ್ ಮಾಡಿದ್ದುದು ಸಿಓಡಿ ಎನ್‌ಕ್ವಾಯರಿ ಮಾಡಿಸಿಯೆಂದು ಇವರು ಆ ಅಧಿಕಾರಿಯನ್ನು ಸೇಫಾಗಿ ಇಟ್ಟರು, ಅದರ ಬಗ್ಗೆ ಅವರೇನೂ ಹೇಳಲಿಲ್ಲ. ಸೆಷನ್‌ಕೋರ್ಟ್ ಜಡ್ಜ್ ಜಡ್ಜ್‌ಮೆಂಟ್ ಕೊಟ್ಟಿವೆ. ಇದು ಇಲ್‌ಲೀಗಲ್ ಡಿಟೆನ್‌ಷನ್ ಇದೆಯೆಂದು ಹೇಳಿದ್ದಾರೆ ಆ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಅದರಲ್ಲಿ ಮೆನ್‌ಷನ್ ಮಾಡಿದ್ದಾರೆ ಇನ್‌ಡೈರೆಕ್ಟಾಗಿ. ಈ ರೀತಿ ವಿಷಯವನ್ನು ಲಘುವಾಗಿ ತೆಗೆದುಕೊಂಡು ಅನಿಲಕುಮಾರ್ ಮತ್ತು ಸಂಗಡಿಗರ ಮೇಲೆ ಕೇಸು ಹಾಕಿದ್ದಾರೆ. ಎರಡನೆಯದು ಅಂದರೆ ಮಂತ್ರಿಗಳಾದ ನಜೀಯವರ ಕ್ಷೇತ್ರದಲ್ಲಿ ಆಗಿದ್ದು ವರ್ಕರ್ಸ್ ಮೇಲೆ ಪೋಲೀಸ್ ಎಕ್ಸಸಸ್ ಆಗಿದ್ದು ಅಲ್ಲಿ ಅಡ್ಮಿಟ್ ಮಾಡುತ್ತೀರಿ. ಉಳಿದ ಕಡೆ ನಾವು ಹೇಳುವಾಗ ಪೋಲೀಸ್ ಎಕ್ಸಸಸ್ ಆಗಿದ್ದು ಅನೇಕ ಉದಾಹರಣೆಗಳಿವೆ. ಅವುಗಳ ಬಗ್ಗೆ ನಾನು ಸ್ಪಷ್ಟವಾಗಿ ಹೇಳಿದ್ದೇನೆ.

ಕೊಡ್ಲಾ ಎನ್ನತಕ್ಕ ಸೇಡಂದು ಮೆನ್‌ಷನ್ ಮಾಡಿ ಉದಾಹರಣೆ ಹೇಳಿದ್ದೇನೆ. ಶುಕ್ರವಾರ ಡಿಟೈನ್ ಮಾಡಿಕೊಂಡರೆ ಸೋಮವಾರ ಅವನಿಗೆ ಬೇಲ್ ಕೊಟ್ಟರು. ನಾನು ಹೇಳುವಾಗ ತಾವೇ ಇದ್ದಿರಿ, ಎರಡು ದಿವಸ ಒಳಗೆ ಹಾಕಿದ್ದರು ಶನಿವಾರ ಭಾನುವಾರ ಎಲ್ಲೂ ಹೋಗುವ ಹಾಗೆ ಇಲ್ಲ. ನನ್ನ ಕ್ಷೇತ್ರದಲ್ಲಿ ವಡ್ಡವೂಟ್ ಎಂಬ ಗ್ರಾಮದಲ್ಲಿ ಒಬ್ಬರು ಜಿಲ್ಲಾಪಂಚಾಯಿತಿಗೆ ನಿಂತು ಸೋತರು, ಅವರು ಮತ ಎಣಿಕೆ ನಡೆಯುವ ಸ್ಥಳದಲ್ಲಿ ಒಳಗೆ ಹೋಗಿ ಬ್ಯಾಲೆಟ್ ಪೇಪರ್ ಕದ್ದವರನ್ನು ಒಳಗೆ ಹಾಕಿದ್ದರು, ಅವನಿಗೆ ರಾತ್ರಿ 12ಕ್ಕೆ ಬೇಲ್ ಕೊಟ್ಟರು. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಇದೆಲ್ಲ ತಮ್ಮ ಗಮನಕ್ಕೆ ಬರುತ್ತದೆಯೋ ಇಲ್ಲವೊ ಗೊತ್ತಿಲ್ಲ.

ಆದರೂ ಇವನ್ನು ಸದನದಲ್ಲಿ ತಂದಿದ್ದೇನೆ. ಹೀಗೆ ತಾರತಮ್ಯವಿದೆ. ನಿಮಗಾದರೆ ಎಕ್ಸಸಸ್, ಇನ್ನೊಬ್ಬರಿಗಾದರೆ ಎಕ್ಸಸಸ್ ಅಲ್ಲವೆ? ಮೂರನೆಯದು ನಾನು ಸರ್ಕಲ್ ಇನ್ಸ್‌ಪೆಕ್ಟರ್ ಬಗ್ಗೆ ಪದೇ ಪದೇ ಮಾತನಾಡುವುದಿಲ್ಲ. ಬೇಕಾಗದೆ ಇರುವವರು ಆ ಸಮಯದಲ್ಲಿ ಅವನು ಒಬ್ಬ ಷೆಡ್ಯುಲ್ಡ್‌ಕಾಸ್ಟ್ ಇದ್ದರೆ ಅವನು ಸಬ್‌ಇನ್ಸ್‌ಪೆಕ್ಟರ್ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಇದ್ದರೆ ನಮಗೆ ತೊಂದರೆಯಾಗುತ್ತದೆ ಖರ್ಗೆಯವರಿಗೆ ಫೇವರ್ ಮಾಡುತ್ತಾರೆಂದು ತಿಳಿದುಕೊಂಡು ಅಪ್ಲಿಕೇಷನ್ ಕೊಟ್ಟು ಟ್ರಾನ್ಸ್‌ಫರ್ ಮಾಡಿಯೆಂದು ಶೇಷನ್‌ಗೆ ಬರೆದರು. ಒಳ್ಳೆಯ ಅಧಿಕಾರಿಯೆಂದು ಇಡೀ ನಿಮ್ಮ ಡಿಪಾರ್ಟ್‌ಮೆಂಟ್ ಹೊಗಳಿ ಡಿಸ್ಟ್ರಿಕ್ಟ್ ಅಲ್ಲದೆ ಹೊರಗಡೆ ಜಿಲ್ಲೆಗಳಿಗೂ ಕಳುಹಿಸುತ್ತಾರೆ. ಎಲ್ಲಿ ಡಕಾಯಿತಿಯಾಗುತ್ತದೆ ಎಲ್ಲಿ ನಕ್ಸಲೇಟ್‌ಗಳ ಹಾವಳಿ ಇರುತ್ತದೆ, ಎಲ್ಲಿ ಪೀಪಲ್ಸ್‌ವಾರ್ ಗ್ರೂಪ್‌ಗಳಿರುತ್ತವೆ ಅಂತಹ ಕಡೆ ಪರ್ಪಸ್ ಆಗಿ ಐಜಿ, ಡಿಐಜಿ, ಎಸ್‌ಪಿಯವರು ಇವರನ್ನು ಕರೆಯಿಸಿ ಅವರಿಗೆ ಕೆಲಸ ಕೊಡುತ್ತಾರೆ. ನಾನು ಅದರ ಬಗ್ಗೆ ಹೇಳುತ್ತಿಲ್ಲ. ಅವರು ದೂರು ಕೊಟ್ಟರು ಎಂದು ನೀವು ತೆಗೆದಿದ್ದೀರಿ, ಅದಕ್ಕೆ ನನ್ನ ಅಭ್ಯಂತರವಿಲ್ಲ. ನನಗೆ ಬೇಕಾಗಿಯೂ ಇಲ್ಲ, ಮತ್ತೆ ಯಾರೋ ಬರುತ್ತಾರೆ ಕೆಲಸ ಮಾಡುತ್ತಾರೆ. ಕೆಲಸ ತೆಗೆದುಕೊಳ್ಳತಕ್ಕ ಶಕ್ತಿ ನಮಗಿದೆ. ಇದು ಏನಾಗುತ್ತದೆ ನೋಡೋಣ ಅದು ನಡೆಯಲಿ. ನಿಮ್ಮ ಪಕ್ಷದ ಮುಖಂಡರ ಮಾತು ಕೇಳುತ್ತಾ ಇದ್ದೀರಿ ಅದು ಒಂದೇ ನೋವು ಬಾಕಿ ಏನೂ ಇಲ್ಲ. ಅಧಿಕಾರಿಗಳು ಬರುತ್ತಾರೆ ಹೋಗುತ್ತಾರೆ, ಅವರ ಮೇಲೆ ಏನೂ ರಾಜಕಾರಣ ನಡೆಯುವುದಿಲ್ಲ. ಅದರ ಬಗ್ಗೆ ಸರಿಯಾದ ಉತ್ತರ ಹೇಳಲಿಲ್ಲ. ಇನ್ನೊಂದು ಏನೆಂದರೆ ಪೋಲೀಸ್ ಪ್ರೊಟೆಕ್ಷನ್ ಬಗ್ಗೆ ತಾವು ಹೇಳಿದ್ದೀರಿ, ಒಬ್ಬ ಶಾಸಕರು ಪೋಲೀಸ್ ಪ್ರೊಟೆಕ್ಷನ್ ಕೇಳಿದರೆ ಕೊಡುತ್ತೀರಿ, ಇನ್ನೊಬ್ಬರು ಕೇಳಿದರೂ ಕೊಡುತ್ತೀರಿ ಅದೇನು ಮಹತ್ವದ್ದಲ್ಲ. ಆದರೆ ನೀವು ಒಂದು ವಾತಾವರಣವನ್ನು ಸೃಷ್ಟಿಮಾಡಿ. ಮುಕ್ತವಾದ ಒಂದು ವಾತಾವರಣ ಇರಬೇಕು, ಯಾರದೇ ಹೆದರಿಕೆ ಇರಬಾರದು, ಗೂಂಡಾಗಳ ಹಾವಳಿ ಇರಬಾರದು, ಹಾಡುಹಗಲೇ ಕೊಲೆಗಳು ಆಗಬಾರದು, ದರೋಡೆಯಾಗಬಾರದು ಇಂತಹ ಒಂದು ವಾತಾವರಣವನ್ನು ನಿಲ್ಲಿಸಿದರೆ ಮುಕ್ತವಾಗಿ ಜನ ಓಡಾಡುತ್ತಾರೆ.

ಇಲ್ಲಿ ಶಾಸಕರು ಪೋಲೀಸ್ ಪ್ರೊಟೆಕ್ಷನ್ ಕೇಳಿದರು ಕೊಟ್ಟಿದ್ದೀರಿ, ಹೊರಗಡೆ ಯಾರೋ ಕೇಳಿದರೆ ಕೊಡುವುದಕ್ಕಾಗುತ್ತದೆಯೆ? ಕರ್ನಾಟಕ 4 ಕೋಟಿ 80 ಲಕ್ಷ ಜನರಿಗೆ ಎಲ್ಲರಿಗೂ ಪೋಲೀಸ್ ಪ್ರೊಟೆಕ್ಷನ್ ಕೊಡುವುದಕ್ಕಾಗುತ್ತದೆಯೆ ಅದಕ್ಕಾಗಿ ಮುಕ್ತವಾದ ವಾತಾವರಣವನ್ನು ತಯಾರು ಮಾಡಿ. ಯಾರಿಗೂ ಹೆದರಿಕೆ ಇರಬಾರದು. ಸರ್ಕಾರ ಅಂದರೆ ಅದು ಜೀವಂತವಾಗಿದೆ ಎನ್ನತಕ್ಕ ವಾತಾವರಣವನ್ನು ತಯಾರು ಮಾಡಿದರೆ ಖಂಡಿತವಾಗಿ ಪೋಲೀಸರು ದೌರ್ಜನ್ಯ ಮಾಡುವುದಕ್ಕೆ ಹೋಗುವುದಿಲ್ಲ. ಗೂಂಡಾಗಳು ತಲೆ ಎತ್ತುವುದಿಲ್ಲ, ಹೊಡೆದಾಟಗಳು ಆಗುವುದಿಲ್ಲ ನಿಲ್ಲುತ್ತವೆ. ಇವೆಲ್ಲವು ಒಂದೇ ದಿವಸದಲ್ಲಿ ನಿಲ್ಲುತ್ತದೆ ಎಂದು ನಾನು ಹೇಳುವುದಿಲ್ಲ. ಏಕೆಂದರೆ ಇದಕ್ಕೆ ಅನೇಕ ಜನ ಕಾರಣಕರ್ತರು ಇರುತ್ತೇವೆ. ಆದರೆ ಡೀಟೈಲ್ ಆಗಿ ಆಳವಾಗಿ ನೋಡಿಕೊಂಡು ನೀವು ಇದರ ಬಗ್ಗೆ ಯೋಚನೆ ಮಾಡಿ ಹೇಳಿದರೆ ನಮಗೆ ಸಂತೋಷವಾಗುತ್ತಿತ್ತು. ನೇರವಾಗಿ ಪೋಲೀಸ್‌ರು ಬೇಕೆಂದರೆ ಕೊಡುತ್ತೇವೆ ಎಂದು ಹೇಳಿದಿರಿ. ಡಕಾಯಿತಿ ಬಗ್ಗೆ ಲಘುವಾಗಿ ಹೇಳಿದರು ನಾವು ಕೆಲವು ಬಿಗಿ ಕ್ರಮ ತೆಗೆದುಕೊಂಡಿದ್ದೇವೆ. ಅದರ ಬಗ್ಗೆ ನೋಡುತ್ತೇವೆಂದು ಹೇಳಿದರು. ನಾನೊಂದು ವಿಷಯವನ್ನು ಹೇಳಿದೆ. ಸಂಗನಗೌಡ ಎಂಬುವರು ನಮ್ಮಲ್ಲಿ ಡಿಸಿಸಿ ಬ್ಯಾಂಕಿನ ಪ್ರೆಸಿಡೆಂಟರು. ಪಾಪ ಅವರ ಮನೆ ಶಹಪುರ ಪಟ್ಟಣದಿಂದ ಒಂದೆರಡು ಕಿಲೋಮೀಟರ್ ದೂರದಲ್ಲಿದೆ. ಅವರ ಮನೆಯ ಬಾಗಿಲು ಹೊಡೆದು ಅವರ ನೌಕರನನ್ನು ಕೊಲೆ ಮಾಡಿ ಮೊನ್ನೆ ಎಲ್ಲವನ್ನು ಡಕಾಯಿತರು ಲೂಟಿ ಮಾಡಿಕೊಂಡು ಹೋದರು. ಅವರು ಅಪ್ಲಿಕೇಶನ್ ಕೊಟ್ಟರು, ಅದರ ಬಗ್ಗೆ ಚಿಂತನೆಯಿಲ್ಲ. ನಾನು ಅದರ ಬಗ್ಗೆ

ಪ್ರಸ್ತಾಪ ಮಾಡಿದರೂ ಕೂಡ ಏನು ಕ್ರಮ ತೆಗೆದುಕೊಂಡಿದ್ದಾರೆ ಅದು ಏನಾಗಿದೆಯೆಂದು ನನಗೆ ಸಮಜಾಯಿಸಿ ಉತ್ತರ ಹೇಳಲಿಲ್ಲ, ಇನ್ನೊಂದು ಏನೆಂದರೆ, ಕೆಲವು ಕಡೆಗಳಲ್ಲಿ ಇದೇ ಕಾಶಪ್ಪನವರ ಕೇಸಿನಲ್ಲಿ ಅಧ್ಯಕ್ಷರೇ ತಮಗೆ ಗೊತ್ತಿದೆ, ಕೇಸನ್ನು ನಾವು ಮಾಡಿದ ತಕ್ಷಣ ಇನ್ನೊಬ್ಬರು ಕೌಂಟರ್ ಕೇಸ್ ಮಾಡುತ್ತಾರೆ. ಏಕೆಂದರೆ ಎರಡೂ ಬಿದ್ದಿರಲಿಯೆಂದು. ನ್ಯಾಯ ಇದ್ದದ್ದು ಅಲ್ಲಿ ಅನ್ಯಾಯವಿದ್ದದ್ದು ಅಲ್ಲಿ ಕೌಂಟರ್ ಕೇಸ್ ಹಾಕಿಬಿಡುತ್ತಾರೆ. ಕೌಂಟರ್ ಕೇಸ್ ಮಾಡಿದ್ದಾರೆ ಅದರ ಬಗ್ಗೆ ಹೇಳಲಿಲ್ಲ.

ಉಪಾಧ್ಯಕ್ಷರು : ಡೀಟೈಲ್ ಆಗಿ ಸಿಓಡಿ ಎನ್‌ಕ್ವಾಯರಿ ಮಾಡಿಸುತ್ತೇನೆಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೇಕಾದರೆ ಎಂದು ಕಂಡೀಷನಲ್ ಆಗಿ ಹೇಳಿದ್ದಾರೆ. ಆಯಿತು ಸಂತೋಷ ಸಿಓಡಿ ಎನ್‌ಕ್ವಾಯರಿ ಮಾಡಿ. ಇನ್ನು ಕೂಡ ಹುಬ್ಬಳ್ಳಿಯಲ್ಲಿ ಗಣೇಶ್ ಪೇಟೆ ಬೇರೆ ಕಡೆ ಚಾಕುಚೂರಿ ಇರಿತ ಹೊಡೆದಾಟ ಮಾಡುತ್ತಿದ್ದಾರೆ, ಇವೆಲ್ಲ ಸಬ್ಜೆಕ್ಟ್‌ಗಳಿವೆ. ಇನ್ನೊಂದು ಏನು ಹೇಳಿದ್ದಾರೆಂದರೆ 26 ವರ್ಷಗಳಿಂದ ಇವತ್ತೆ ಆಗಿದೆ ಎನ್ನುವುದು ನನ್ನ ಗಮನಕ್ಕೆ ಬಂದಿಲ್ಲ ಅಧಿಕಾರಿಗಳ ಗಮನಕ್ಕೆ ಬಂದಿಲ್ಲವೆಂದು ಹೇಳಿದರು. ನಿನ್ನ ದಿವಸದ ಪತ್ರಿಕೆಯನ್ನು ನೋಡಿದರೆ ಗೊತ್ತಾಗುತ್ತದೆ. ಸುಮಾರು 26 ವರ್ಷಗಳ ಹಿಂದೆ 1969ರಲ್ಲಿ ಇದೇ ರಂಗಪಂಚಮಿ ದಿವಸ ಇದೇ ಸ್ಥಳದಲ್ಲಿ ಕಾಮನ ಮೆರವಣಿಗೆ ಬಂದಾಗ ಸಂಭವಿಸಿದ ಗಲಭೆ ಪುನರಾವರ್ತನೆಯಾಗಿದೆ. ಅದೇ ರೀತಿಯಲ್ಲಿ ಈ ಬಾರಿಯೂ ಹಿಂಸಾಚಾರ ನಡೆದಿದೆ. ಅಂದರೆ 26 ವರ್ಷಗಳ ಹಿಂದೆ ಆ ಓಣಿಯಲ್ಲಿ ಅದು ಆಗಿತ್ತು. ಅದಕ್ಕಾಗಿ ಅಂದಿನಿಂದ ಇಂತಹ ಘಟನೆಗಳು ಆಗಬಾರದೆಂದು ಪ್ರೊಸೆಷನ್ ಪ್ರಾಹಿಬಿಟ್ ಮಾಡಿದ್ದರು. ಆದರೆ ಈ ಸಾರಿ ಅದಕ್ಕೆ ಪರ್ಮಿಶನ್ ಕೊಟ್ಟಿದ್ದಾರೆ.

ಉಪಾಧ್ಯಕ್ಷರು : ನೀವು ಭಾಷಣ ಮಾಡಬೇಡಿ, ತಾವು ಹಿರಿಯರು ಇದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಭಾಷಣ ಅಲ್ಲ, 26 ವರ್ಷಗಳಿಂದ ನನಗೆ ಗೊತ್ತಿಲ್ಲವೆಂದು ಹೇಳಿದರು, ಅದಕ್ಕೆ ನಾನು ಹೇಳಬೇಕಾಗಿದೆ. ಈ ಓಣಿಯಲ್ಲಿ ಹೋಗಿಲ್ಲ, ಬರುವಾಗ ಜನ ಬಂದರು ಪ್ರೊಸೆಷನ್ 11 ಗಂಟೆಗೆ ಹೋಯಿತು ಕೆಲವು ಜನ ಮಾತ್ರ ಬಂದರು ಎನ್ನತಕ್ಕ ಮಾತನ್ನು ಹೇಳಿದರು. ಎಸ್‌ಜಿಡಿ ಮುಲ್ಲಾರವರು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಬರೆದಿದ್ದಾರೆ ಅದು ಇವತ್ತೆ ಬಂದಿದೆ ಅವರು ಏನು ಹೇಳುತ್ತಾರೆ, ಅದು ಈ ರೀತಿ ಇದೆ.

"Every year the procession takes another route, but this year in view of the peaceful situation prevailing in the City it was allowed on Mullabad. The police had not taken enough precautionary measure to prevent such incident."

ಏನು ಹೇಳುತ್ತಾರೆಂದರೆ, ಆ ಓಣಿಯಲ್ಲಿರತಕ್ಕ ಒಬ್ಬ ಐವಿಟ್‌ನೆಸ್ ಹೇಳಿದ್ದಾರೆ, ಅದನ್ನು ಬರೆದಿದ್ದಾರೆ. ಪ್ರೊಸೆಷನ್ ಅಲ್ಲಗೆ ಹೋಗಿಲ್ಲ, ಬರುವಾಗ ಬಂದಿದೆ ಎನ್ನತಕ್ಕ ಮಾತು, ಅದು ಸರಿಯಲ್ಲ. ನಾವು ನಿರೀಕ್ಷೆ ಏನು ಮಾಡಿದ್ದೆವು ಅಂದರೆ ಕೆಲವು ಜನರ ಮೇಲೆ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಂಡು ಹಾಗೆ ಮಾಡುತ್ತೇವೆ ಹೀಗೆ ಮಾಡುತ್ತೇವೆಂದು ಹೇಳಲಿಲ್ಲ. ಸದನದ ಸಮಿತಿಯನ್ನು ಮಾಡಿ ಈ ಎಲ್ಲ ಘಟನೆಗಳ ಬಗ್ಗೆ ಸಮಗ್ರವಾಗಿ ತನಿಖೆ ಮಾಡಿಸಿ ಎಂದು ಹೇಳಿದೆ. ಹುಬ್ಬಳ್ಳಿಯ ಘಟನೆಯ ಬಗ್ಗೆ ಜುಡಿಸಿಯಲ್ ಪ್ರೊಬ್ ಮಾಡಿದ್ದೀರಿ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಉಳಿದಂತಹ ಘಟನೆಗಳ ಬಗ್ಗೆ ಇನ್‌ಡೆಫ್ತಾಗಿ ಹೇಳದೆ, ಇಂತಹ ಒಂದು ಉತ್ತರದಿಂದ ನಮಗೇನು ಸಮಾಧಾನವಾಗಿಲ್ಲ. ಕೊಟ್ಟಿರತಕ್ಕ ಉತ್ತರದಿಂದ ಸಮಾಧಾನವಿಲ್ಲದಿರುವುದರಿಂದ

ಮತ್ತು ಕಾನೂನು ಸುವ್ಯವಸ್ಥೆ ದಿನೇ ದನೇ ಹಾಳಾಗುತ್ತಿದೆ, ಇಂತಹ ಪರಿಸ್ಥಿತಿ ಇವತ್ತೂ ಕೂಡ ಹುಬ್ಬಳ್ಳಿಯಲ್ಲಿದೆ. ಅದಕ್ಕೆ ನಾವು ಸಭಾತ್ಯಾಗವನ್ನು ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರಾದ ಮಲ್ಲಿಕಾರ್ಜುನ ಖರ್ಗೆಯವರ ಜೊತೆಯಲ್ಲಿ ಕಾಂಗ್ರೆಸ್ (ಐ)ಸದಸ್ಯರು ಸಭಾತ್ಯಾಗವನ್ನು ಮಾಡಿದರು)

ಶ್ರೀ ಹೆಚ್.ಡಿ. ದೇವೇಗೌಡ : ನಾನು ಹೇಳುವುದನ್ನು ಕೇಳಿ ಸಭಾತ್ಯಾಗ ಮಾಡಿದ್ದರೆ ಬಹಳ ಒಳ್ಳೆಯದಿತ್ತು. ಮಾನ್ಯ ಮೊಯಿಲಿಯವರೇ ಮತ್ತು ಖರ್ಗೆಯವರೇ ನಾನು ಹೇಳುವ ಎರಡು ಮಾತುಗಳನ್ನು ಕೇಳಿ ಹೊರಗೆ ಹೋಗಿ. ಒಬ್ಬ ವ್ಯಕ್ತಿಯ ಹೆಸರು ತೆಗೆದು ಮಾತನಾಡಬಾರದೆಂದು ನಾನು ಬಹಳ ಹುಷಾರಾಗಿ ಮಾತನಾಡಿದೆ. ಯಾವ ಅನಿಲಕುಮಾರ್‌ರವರ ಹೆಸರನ್ನು ಅವರು ಹೇಳಿದ್ದಾರೊ ಅವನ ಮೇಲೆ ಗೂಂಡಾ ಆಕ್ಟ್‌ನ ಕೆಳಗೆ ಕೇಸ್ ಹಾಕಿ ಕ್ರಮ ತೆಗೆದುಕೊಳ್ಳಬೇಕೆಂದು ಅವರ ಸರ್ಕಾರವೇ ಆರ್ಡರ್ ಮಾಡಿದೆ, ನಾನಲ್ಲ ಆರ್ಡರ್ ಮಾಡಿದ್ದುದು.

Series of cases have been registered against tthe gentleman by the previous Government. ನಾನು ಒಂದು ಪಕ್ಷವನ್ನು ಅವಹೇಳನ ಮಾಡಬೇಕೆಂದು ಈ ಸಭೆಯಲ್ಲಿ ಮಾತನಾಡುವುದಕ್ಕೆ ಹೋಗಲಿಲ್ಲ. ಇಂತಹ ವಿಷಯವನ್ನು ಎತ್ತುವಾಗ ಸ್ವಲ್ಪಮಟ್ಟಿಗೆ ಎಚ್ಚರಿಕೆಯಿಂದ ಎತ್ತಿದರೆ ಬಹಳ ಒಳ್ಳೆಯದು. ಬಹಳ ದಿವಸ ಅಧಿಕಾರದಲ್ಲಿರಬೇಕೆಂದು ನನಗೇನೂ ಆಸೆಯಲ್ಲ. ಇದನ್ನು ಎಕ್ಸ್‌ಪ್ರೋಸ್ ಮಾಡಿ ಅದರಿಂದ ಏನೋ ಕಿರೀಟ ತೆಗೆದುಕೊಳ್ಳಬೇಕೆಂದೇನೂ ಇಲ್ಲ. Series of cases, ಸರ್ಕಾರಕ್ಕೆ ಅವಹೇಳನ ಮಾಡಬೇಕು. ಮೂರೂವರೆ ತಿಂಗಳಲ್ಲಿ ಈ ರಾಜ್ಯದಲ್ಲಿ ನಾಗರೀಕ ಸರ್ಕಾರ ಕೊಡುವುದಕ್ಕೆ ಯೋಗ್ಯತೆಯಿಲ್ಲವೆಂದರೆ ಜನ ನಂಬಬೇಕಲ್ಲ ಜನ ನಂಬಿದ್ದಾರೋ ಇಲ್ಲವೋ ಅದನ್ನು ಚರ್ಚೆ ಮಾಡೋಣ ಅದನ್ನೆಲ್ಲ ನಾನು ಹೇಳುವುದಕ್ಕೆ ಹೋಗುವುದಿಲ್ಲ. I do not want to take that issue now. The Director General of Police, Karnataka in March 1993 has ordered to take action against Sri Anil Kumar Patil under the Goonda Act. ನಾನು ಕೊನೆಯಲ್ಲಿ ಹೇಳಿದೆ. ಹಿಂದೆ ಏನೇನು ನಡೆದಿದೆ ಅದೆಲ್ಲ ನನ್ನ ಹತ್ತಿರ ಮಾಹಿತಿಯಿದೆ. ಡಕಾಯಿತಿ ಪ್ರಶ್ನೆ ಬಗ್ಗೆ ಸರ್ಕಾರ ಕೈಕಟ್ಟಿ ಕುಳಿತಿಲ್ಲ. ಏನಾಗಿದೆ ಎಂದು ಸಭೆಯಲ್ಲಿ ಪ್ರವರ ಹೇಳುವುದಕ್ಕೆ ಹೋಗಲಿಲ್ಲ. ಒಂದು ಶಬ್ದ ಹೇಳಿದೆ. We are not afraid of taking action even against any senior Officer. ಒಂದೊಂದು ಸಾರಿ ದೇವೇಗೌಡರು ಜೋರಾಗಿ ಮಾತನಾಡುತ್ತಾರೆಂದು ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳುತ್ತಾರೆ ಅದಕ್ಕೆ ನಾನು ಸ್ವಲ್ಪ ಮೃದುವಾಗಿಯೇ ಮಾತನಾಡುತ್ತೇನೆ.

ಆಂಧ್ರ ಮತ್ತು ಮಹಾರಾಷ್ಟ್ರ ಗಡಿಗಳಲ್ಲಿ ಹೊಂದಿಕೊಂಡಿರತಕ್ಕ ಜಿಲ್ಲೆಗಳಲ್ಲಿ ರಾತ್ರಿವೇಳೆ ಓಡಾಡುವ ಬಸ್ಸುಗಳಿಗೆ ಸಶಸ್ತ್ರ ಪೋಲೀಸರನ್ನು ಹಾಕಲಾಗಿದೆ. ಹೆದ್ದಾರಿಗಳಲ್ಲಿ 12 ಗಸ್ತಿನ ತಂಡಗಳನ್ನು ಮಾಡಿ, ಆ ತಂಡಗಳಿಗೆ 12 ವಾಹನಗಳನ್ನು ಕೊಟ್ಟು ರಾತ್ರಿವೇಳೆಯಲ್ಲಿ ಹೆದ್ದಾರಿಗಳಲ್ಲಿ ಗಸ್ತು ತಿರುಗುವ ವ್ಯವಸ್ಥೆಯನ್ನು ಮಾಡಿದ್ದೇವೆ. ಡಕಾಯಿತಿಗೆ ಸಂಬಂಧಪಟ್ಟ ಹಾಗೆ ಡಿಐಜಿಗಳ ಉಸ್ತುವಾರಿಯಲ್ಲಿ ಮೂರು ದಿನ ತಿರುಗಾಡಲು ವ್ಯವಸ್ಥೆ ಮಾಡಿದ್ದೇವೆ. The DIG of Police should work like a Captain of the whole team. ಅವರಿಗೆ ಈವೊಂದು ಜವಾಬ್ದಾರಿಯನ್ನು ಕೊಟ್ಟಿದ್ದೇವೆ. ಮೂರು ಜನ ಡಿಐಜಿಗಳನ್ನು ಹಾಕಿದ್ದೇವೆ. ಅವುಗಳನ್ನು ಬಲಪಡಿಸಲಾಗಿದೆ. ಗಡಿ ರಾಜ್ಯಗಳ ವರಿಷ್ಠಾಧಿಕಾರಿಗಳ ಜೊತೆಯಲ್ಲಿ ಸಂಪರ್ಕವನ್ನು ಇಟ್ಟು ಡಕಾಯಿತಿಗೆ ಸಂಬಂಧಪಟ್ಟ ಮಾಹಿತಿಗಳನ್ನು ವಿನಿಮಯ ಮಾಡಿಕೊಳ್ಳಲಾಗಿದೆ. ಡಕಾಯಿತಿ ಗ್ಯಾಂಗ್‌ಗಳು ಗಡಿ ರಾಜ್ಯಗಳಾದ ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರಗಳ ಕಡೆಯಿಂದ

ಬರುತ್ತಿರುವುದರಿಂದ ಈ ಎರಡೂ ರಾಜ್ಯಗಳ ಪೋಲೀಸ್ ಇಲಾಖೆಯೊಂದಿಗೆ ನಿಕಟ ಸಂಪರ್ಕವನ್ನಿಟ್ಟುಕೊಂಡು ಡಕಾಯಿತಿಗಳ ಸಂಪೂರ್ಣ ಮಾಹಿತಿಯನ್ನು ಪಡೆದುಕೊಳ್ಳುವ ಪ್ರಯತ್ನ ಸತತವಾಗಿ ನಡೆಯುತ್ತಿದೆ. ಡಕಾಯಿತಿಗಳ ಚಲನವಲನದ ಬಗ್ಗೆ ನಿಗಾ ಇಡಲಾಗಿದೆ. ಆ ರಾಜ್ಯಗಳ ಪೋಲೀಸ್ ಇಲಾಖೆಯಲ್ಲಿ ನಮ್ಮ ರಾಜ್ಯದ ಪೋಲೀಸ್ ಇಲಾಖೆಯವರು ಮಾಹಿತಿಯನ್ನು ಪಡೆದುಕೊಳ್ಳುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಬರೀ ಟೀಮ್ ಮಾಡಿದಾಗ ವಾಹನ ಮತ್ತೊಂದು ಸರ್ಕಾರಕ್ಕೆ ಎಷ್ಟೇ ಖರ್ಚು ಬಂದರೂ, ಹಣಕಾಸಿನ ಮುಗ್ಗಟ್ಟು ಎಷ್ಟೇ ಇದ್ದರೂ ಚಿಂತಯಿಲ್ಲವೆಂದು ಹೇಳಿ ವಿಶೇಷ ದಳಗಳನ್ನು ನೇಮಕ ಮಾಡಿ ಸರ್ಕಾರ ಮುಂಜಾಗ್ರತೆ ಕ್ರಮವನ್ನು ತೆಗೆದುಕೊಂಡಿದೆ.

ಇನ್ನೊಂದು ಮಾತನ್ನು ಮಾನ್ಯ ಕಾಶಪ್ಪನವರ ಬಗ್ಗೆ ಹೇಳಿದರು. ಅದರ ಬಗ್ಗೆ ಸಿಓಡಿ ಎನ್‌ಕ್ವಾಯರಿ ಮಾಡಿಸುತ್ತೇನೆಂದು ಹೇಳಿದ್ದೇನೆ. S.P has gone there, D.C has gone there. ಅವರು ಹೋಗಿ ಅಲ್ಲಿ ನಡೆದಿರತಕ್ಕ ವಿದ್ಯಾಮಾನಗಳನ್ನು ಹೇಳಿದರೆ ಏನೂ ನಡೆದಿಲ್ಲವೆಂದರೆ, ಅಲ್ಲಿಗೆ ಹೋಗಿರತಕ್ಕ ಅಧಿಕಾರಿಗಳು ಹೇಳುವುದನ್ನು ಇಲ್ಲವೆನ್ನುವುದಾದರೆ ಈ ಸಭೆಯಲ್ಲಿ ನಾನೇನು ಹೇಳಲಿ? ಸಿಓಡಿ ಎನ್‌ಕ್ವಾಯರಿ ಮಾಡಿಸುತ್ತೇನೆ. ಶಾಸಕರಿಗೆ ಸ್ಪೆಷಲ್‌ಪ್ರಿವಿಲೇಜ್ ಏನೂ ಇರುವುದಿಲ್ಲ. ಮಾನ್ಯ ಬಂಗಾರಪ್ಪನವರು ಮುಖ್ಯ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ, ಮಾನ್ಯ ಮೊಯ್ಲಿಯವರು ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ, ನಾಳೆ ಯಡಿಯೂರಪ್ಪನವರು ಮಾಡಬಹುದು ನಾನು ಬೇಡವೆಂದು ಹೇಳುವುದಿಲ್ಲ. ಆದರೆ ಶಾಸಕರಿಗೆ ನಾವು ಹೊರಗಡೆ ಕಾನೂನು ಯಾವುದು ಪ್ಪೈ ಮಾಡಬೇಕು ಯಾವುದು ಮಾಡಬಾರದೆಂದು immunity ಇಲ್ಲ. ಯಾವುದಾದರೂ ದರೋಡೆ ಕೊಲೆ ಕೇಸಿನಲ್ಲಿ ಇನ್‌ವಾಲ್ವ್ ಆಗಿದ್ದರೆ ಅರೆಸ್ಟ್ ಮಾಡುತ್ತಾರೆ. ನಿಮಗೆ ಇನ್‌ಫರ್ಮೇಷನ್ ಕೊಡುತ್ತಾರೆ ಅಷ್ಟೇ that so and so has been arrested. That is all the privilege we have got. ಮತ್ತೆ ಅದಕ್ಕಿಂತ ಹೆಚ್ಚೇನೂ ಇಲ್ಲ. ವಾಟಾಳ್ ನಾಗರಾಜ್‌ರವರನ್ನು ಎಷ್ಟು ಸಾರಿ ಅರೆಸ್ಟ್ ಮಾಡಿದ್ದಾರೆ?

ಶ್ರೀ ವಾಟಾಳ್ ನಾಗರಾಜ್ : ನನ್ನನ್ನು ಬಂಧನ ಮಾಡಿರುವುದು ಕೊಲೆ ದರೋಡೆ ಮಾಡಿದ್ದಕ್ಕಲ್ಲ. ಏಕೆಂದರೆ ನೀವು ಹಾಗೆ ಹೇಳುವುದು, ನಾಳೆ ಅಲ್ಲಿ ಹಾಗೆ ಬರೆದು ಅದು (ನಗು) ಪತ್ರಿಕೆಗಳಲ್ಲಿ ಬಂದು ಎಲ್ಲಿ ಕೋ೬ ದರ್ರೋಡೆ ಮಾಡಿದಿರಿಯೆಂದು ಜನ ಕೇಳಿಯಾರು.

ಶ್ರೀ ಹೆಚ್.ಡಿ. ದೇವೇಗೌಡ : ನಾನು ಆ ಚಾರ್ಜ್‌ನಲ್ಲಿ ಅರೆಸ್ಟ್ ಮಾಡಿದ್ದಾರೆಂದು ಹೇಳಲಿಲ್ಲ. ಹೊರಗಡೆ ಅರೆಸ್ಟ್ ಆದರೆ, ಅರೆಸ್ಟ್ ಮಾಡಿರುವುದನ್ನು ತಿಳಿಸಬೇಕು ಅಷ್ಟೆ, ಅವರ ಬಗ್ಗೆ ನಾನು ಆರೋಪ ಮಾಡಲಿಲ್ಲ. ಅಲ್ಲಿ ಏನು ನಡೆಯಿತು ಎನ್ನುವ ವಿಷಯ ಬೇರೆ. ಸದನದ ಗೌರವವನ್ನು ಉಳಿಸಿಕೊಳ್ಳಬೇಕು ಈ ಸದನದಲ್ಲಿ ಯಾವುದೇ ಚ್ಯುತಿ ತರಬಾರದು ಎನ್ನುವ ಗಾಂಭೀರ್ಯತೆಯಿಂದ ಇಲ್ಲಿಗೆ ಬಿಡುತ್ತೇನೆ. ಅದನ್ನು ಸಿಓಡಿ ಎನ್‌ಕ್ವಾಯರಿ ಮಾಡಿಸುತ್ತೇನೆ. ಆದರೆ ಹಿನ್ನಲೆ ಏನೆಂದು ಪೂರ್ಣವಾಗಿ ಗೊತ್ತಿದೆ. ಸಿಓಡಿ ಎನ್‌ಕ್ವಾಯರಿ ಮಾಡಿಸುತ್ತೇನೆಂದರೆ ಅದಕ್ಕೂ ಸಮಾಧಾನವಿಲ್ಲವೆಂದರೆ ನಾನೇನು ಹೇಳಬೇಕು. ಜುಡಿಷಿಯಲ್ ಎನ್‌ಕ್ವಾಯರಿಗೆ ನಾನು ಒಪ್ಪಿಕೊಳ್ಳುತ್ತೇನೆ ಅಲ್ಲಿ ಹೀಗಾಯಿತು ಇಲ್ಲಿ ಹೀಗಾಯಿತು ನೀವೇನು ಮಾಡಲಿಲ್ಲವೆಂದರೆ ನಿಮ್ಮ ಹತ್ತಿರ ಏನೇನು ಮಾಹಿತಿ ಇದೆ ಅದನ್ನೆಲ್ಲ ಜುಡಿಷಿಯಲ್ ಎನ್‌ಕ್ವಾಯರಿ ಮುಂದೆ ಆಫಿಡವಿಟ್ ಹಾಕಿ I have accepted that. What else you want?

ಆದ್ದರಿಂದ ಈ ಸರ್ಕಾರ 116 ದಿನಕ್ಕೆ ಅಥವಾ 110-115 ದಿನಗಳಲ್ಲಿ ಸ್ವರ್ಗವನ್ನು ಭೂಲೋಕಕ್ಕೆ ಇಳಿಸಿಕೊಂಡು ಬಂದಿದ್ದೇವೆಂದು ನಾನು ಹೇಳಲಿಲ್ಲ. ಶಕ್ತಿಮೀರಿ ಹಲವಾರು ದೋಷಗಳು ಇದ್ದರೂ ಮೂರು ಮೂರೂವರೆ ತಿಂಗಳಿನಲ್ಲಿ ಅದನ್ನು ತಿದ್ದುವುದಕ್ಕೆ

ಪ್ರಯತ್ನ ಮಾಡಿದ್ದೇವೆ. ದಾಮಾಷ ಅಧಿಕಾರಿಗಳನ್ನು ವರ್ಗ ಮಾಡುವುದಕ್ಕೆ ಹೋಗಿಲ್ಲ. ಯಾವುದೇ ಸನ್ನಿವೇಶದಲ್ಲಿ ಎಷ್ಟೇ ಒತ್ತಡ ಬಂದರೂ, ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದವರು ಎಷ್ಟು ಒತ್ತಡ ಬಂತು ಎಂಬುದು ಅವರಿಗೆ ಗೊತ್ತಿರಬಹುದು, ಚುನಾವಣೆ ನಡೆಯತಕ್ಕ ಕಾಲದಲ್ಲಿ ಈ ಅಧಿಕಾರಿಗಳನ್ನು ಇಟ್ಟುಕೊಂಡು ಕೆಲಸ ಮಾಡುವುದಕ್ಕಾಗುವುದಿಲ್ಲವೆನ್ನುವ ಮಟ್ಟಕ್ಕೆ ಹೋಯಿತು. I never yielded. ನಾಲ್ಕೈದು ಜನ ಒಡಿ ಕಳುಹಿಸಿರುವುದನ್ನು ಬಿಟ್ಟು ನಾನು ಈ ಸಭೆಯಲ್ಲಿ ಪಟ್ಟಿಯನ್ನು ಇಡುತ್ತೇನೆ ಇದನ್ನು ಬಿಟ್ಟು ನಾನು ಇನ್ನೆಲ್ಲಿಗೆ ಹೋಗಲಿ, ಈ ಸರ್ಕಾರದ ಮತ್ತು ಹಿಂದಿನ ಸರ್ಕಾರಗಳ ಮಾಹಿತಿಯನ್ನು ಇಡುವುದಾದರೆ ಯಾವ್ಯಾವ ಕಾಲದಲ್ಲಿ ಏನೇನು ನಡೆದಿದೆ ಪ್ರತಿಯೊಂದೂ ಎಷ್ಟೆಷ್ಟು ಪಂಚಾಯಿತಿ ಚುನಾವಣೆಯಲ್ಲಿ ಏನಾಗಿದೆಯೆಂದು ಹೇಳತಕ್ಕ ಪ್ರಯತ್ನ ಮಾಡುವುದಾದರೆ ನಾನು ಬಹುಶಃ ಅದೆಲ್ಲ ಹೇಳಲಿಲ್ಲ. ಅವರಿಗೆ ಅರ್ಥವಾಗುತ್ತದೆಂದು ಹೇಳಲಿಲ್ಲ, ಯಾವುದೇ ಒಂದು ಸರ್ಕಾರ ತನ್ನ ಸಮರ್ಥನೆ ಮಾಡುವುದಕ್ಕೆ ಹೋಗಿ ಹಿಂದೆ ನಡೆದಿರುವ ಘಟನೆಗಳನ್ನು ವಿಶ್ಲೇಷಣೆ ಮಾಡಬಾರದೆಂಬ ಕಾರಣದಿಂದ ನಾನು ಹೇಳಲಿಲ್ಲ. ಆ ರೀತಿ ನಾನು ಸಮರ್ಥಣೆ ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ಅದರ ಅವಶ್ಯಕತೆ ನನಗೆ ಇಲ್ಲ. ಪಂಚಾಯಿತಿ ಚುನಾವಣೆಯಲ್ಲಿ 7 ಜನರ ಕೊಲೆಯಾಯಿತು. ಜಿಲ್ಲಾಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಒಂದು ಕೊಲೆ ಆಗಲಿಲ್ಲ. ಅದನ್ನು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಜನ ತೀರ್ಪು ಕೊಟ್ಟಿದ್ದಾರೆ ಅದಕ್ಕೆ ನಾವು ತಲೆಬಾಗಿದ್ದೇವೆ. ಮಾನ್ಯ ಯಡಿಯೂರಪ್ಪನವರು ಇಲ್ಲೆ ಇದ್ದಾರೆ ಒಂದು ಮಾತನ್ನು ಹೇಳುತ್ತೇನೆ, ಕಾನೂನು ಪಾಲನೆ ಮಾಡತಕ್ಕ ಕಾಲದಲ್ಲಿ ಪಕ್ಷ ರಾಜಕೀಯ ಹಸ್ತಕ್ಷೇಪ ಮಾಡುವುದಕ್ಕೆ ಬಿಡುವುದಿಲ್ಲ, ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಇಡೀ ರಾಜ್ಯದ 5 ಕೋಟಿ ಜನತೆಯ ಮಾನ, ಪ್ರಾಣ, ಆಸ್ತಿ ರಕ್ಷಣೆ ಮಾಡುವ ಜವಾಬ್ದಾರಿಯನ್ನು ನಾವು ಹೊತ್ತುಕೊಂಡಿರುವಾಗ ಶಕ್ತಿಮೀರಿ ಪ್ರಯತ್ನ ಮಾಡುತ್ತೇವೆ. ಇದಕ್ಕಿಂತ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ವೀರಪ್ಪ ಮೊಯಿಲಿಯವರು ಕಳುಹಿಸಿ ಕೊಟ್ಟಿರತಕ್ಕ ನಿಲುವಳಿ ಸೂಚನೆಯ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ ಉತ್ತರ ಕೊಡಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬಂಗಾರಪ್ಪನವರು ಏನೋ ಹೇಳಲಿಕ್ಕೆ ಮೂರನೇ ಸಾರಿ ಕೈ ಎತ್ತಿದ್ದಾರೆ, ಅವರು ಹೇಳುವುದನ್ನು ಸ್ವಲ್ಪ ಕೇಳಿ.

ಉಪಾಧ್ಯಕ್ಷರು : ಇಲ್ಲ ಬಹಳ ಸಮಯವಾಗಿದೆ. ಮುಖ್ಯಮಂತ್ರಿಗಳು ನಿಲುವಳಿ ಸೂಚನೆ ಮಂಡನೆಗೆ ಉತ್ತರ ನೀಡಿದ್ದಾರೆ. ನಿಲುವಳಿ ಸೂಚನೆಗೆ ಅನುಮತಿಯನ್ನು ನಿರಾಕರಿಸಿದ್ದೇನೆ. ಈಗ ಸಭೆಯನ್ನು 1 ಗಂಟೆ ಕಾಲ ಮುಂದಕ್ಕೆ ಹಾಕಲಾಗಿದೆ. ಸಭೆಯು ಪುನಃ 3.30ಕ್ಕೆ ಸೇರುವುದು.

(ಸಭೆಯು 2 ಗಂಟೆ 40 ನಿಮಿಷಗಳಿಗೆ ಮುಂದೂಡಲ್ಪಟ್ಟು ಪುನಃ 3 ಗಂಟೆ 30 ನಿಮಿಷಗಳಿಗೆ ಸಮಾವೇಶಗೊಳ್ಳಲು ನಿಶ್ಚಯಿಸಲಾಯಿತು)

(ಸಭೆಯು ಮತ್ತೆ 3-40ಕ್ಕೆ ಸಮಾವೇಶಗೊಂಡಿತು. ಮಾನ್ಯ ಸಭಾಧ್ಯಕ್ಷರಾದ ಶ್ರೀ ರಮೇಶ್‌ಕುಮಾರ್‌ರವರು ಪೀಠವನ್ನು ಅಲಂಕರಿಸಿದರು).